ಕೊರವಂಜಿ

KORAVANJI
Kannada Monthl

ಸಂಪಾದಕರು:
ಶ್ರೀ|| ರಾ. ಶಿ.

ಬರಹಗಾರರು:

ಶ್ರೀ|| ಅ. ರಾ. ಸೆ.
ಶ್ರೀ|| ಕುಮಾರ್
ಶ್ರೀ|| ಕೆ. ಎನ್. ಕಿಟ್ಟನ್
ಶ್ರೀ|| ಹಾ. ರಾ.
ಶ್ರೀ|| ಪ್ರಸಾದ್
ಶ್ರೀ|| ಜೋವ ರಾವನ್
ಶ್ರೀ|| ನಾ. ಪಾ. ಲಚ್ಚಮ್ಮ
ಶ್ರೀ|| ರಾಮಿ
ಶ್ರೀ|| ಹಾ. ವೈ. ಸೂರಿ
ಶ್ರೀ|| ಕೊಳ್ಳೆಗಾಲ
ಡ್ಮಾ ಮೂನೆ
ಶ್ರೀಮತಿ|| ಎ. ಶ್ರೀಧರ
ಇತ್ಯಾದಿ, ಇತ್ಯಾದಿ



ಸೆಪ್ಟೆಂಬರ್
೧೯೬೩.

೨೫ ನ. ಪೈ.

ನಗೆಯ ಮಾಸಪತ್ರಿಕೆ


For 3 way Beauty Treatment....
RAJA
SNOW
AMLA HAIR OIL, KASTURI SOAP
MANYAM & CO BANGALORE MADRAS MADURAI BOMBAY

ಕೊರವಂಜಿ

ಸಂಪುಟ ೨೨ ಸೆಪ್ಟೆಂಬರ್ ೧೯೬೩ ಸಂಚಿಕೆ ೬

ಅಭಿನಂದನೆಗಳು

ಜನವೋ ಜಯ ಕಾರವಾಡಿ ಗುಂಪಿನಲ್ಲಿನ ಗೋವಿಂದನನ್ನೇ ನಾಯಕನನ್ನಾಗಿ ಮಾಡಿ, ತಮ್ಮನ್ನು ತಾವೇ ಆಳೋ ಹಾಗೆ ಆದಾಗ, ಸಾಹಿತ್ಯ, ನಾಟಕ, ಸಂಗೀತ, ನೃತ್ಯ ಇತ್ಯಾದಿ ಕಲೆಗಳಲ್ಲಿ ಕೂಡ ಗುಂಪಿನಲ್ಲಿ ಎಷ್ಟು ಜನ ಗೋವಿಂದ ಅಂತ ಕೂಗಿದರು, ಎಂದು ಎಣಿಕೆ ಹಾಕಿ, ಪ್ರವೀಣರನ್ನು ಚುನಾಯಿಸಿ ರಾಷ್ಟ್ರ ಮರ್ಯಾದೆ ಅರ್ಪಿಸೋದು ಸ್ವಾಭಾವಿಕ. ಸಹಜ.

ಹೀಗಾಗುವಾಗಲೂ ಕೂಡ ಒಮ್ಮೊಮ್ಮೆ ನಿಜವಾಗಲೂ ತಮ್ಮ ಜೀವನದ ಧ್ಯೇಯವನ್ನೇ ಕಲೆಯ ಒಂದು ಮುಖದ ಆರಾಧನೆಗೆ ಮೀಸಲಿಟ್ಟ ಆ ಹಿರಿಯ ಧ್ಯೇಯಕ್ಕಾಗಿ, ಸಕಲ ಸಾಮಾಜಿಕ ಸಾಂಸಾರಿಕ ಕಷ್ಟನಿಷ್ಠೂರಗಳನ್ನೂ ಬದಿಗಿಟ್ಟು ಏಕಾಗ್ರಚಿತ್ತತೆಯಿಂದ ತಪಿಸಿ ತಪಸ್ಸುಮಾಡುವ, ಹಿರಿಯ ಕಲಾರಾಧಕರಿಗೆ ರಾಷ್ಟ್ರ ಮರ್ಯಾದೆಯು ಲಭಿಸುವುದೂ ಉಂಟು.

ಗುಂಪಿನವರೆಲ್ಲ ಗೋವಿಂದ ಅನ್ನುವುದರ ಜತೆಗೆ ಗೋವಿಂದ ಕೂಡ ಗೋವಿಂದ ಅಂತ ಕೂಗು ಹಾಕಿರಬೇಕು—ಅಂತಹ ಸಂದರ್ಭಗಳಲ್ಲಿ.

ಕೊರವಂಜಿಯ ಮಾನ್ಯ ಬಳಗದಲ್ಲಿನ ನಾಟಕ ಕಲಾರಾಧಕ ಶ್ರೀ ಆದ್ಯ ರಂಗಾಚಾರ್ಯರಿಗೆ, ಸಂಗೀತ ನಾಟಕ ಅಕಾಡಮಿಯವರ ರಾಷ್ಟ್ರ ಪ್ರಶಸ್ತಿಯು, ಈ ವರ್ಷ ದೊರೆತಿದೆ. ಮೇಲೆ ಸೂಚಿಸಿದ ಅಸಾಮಾನ್ಯ ಘಟನೆಯು ಗೋವಿಂದನ ದಯೆಯಿಂದ ನಡೆದುಹೋಗಿದೆ.

ಗೋವಿಂದನ ದಯೆಯು ಶ್ರೀರಂಗರ ಮೇಲೆ ಯಾವಾಗಲೂ ಇರಲಿ ಎಂದು ತಲೆಬಾಗಿ ಪ್ರಾರ್ಥಿಸಿ, ನಂತರ ಅವರನ್ನು ಅಭಿನಂದಿಸುತ್ತಾಳೆ, ಕೊರವಂಜಿ.

★ ಕುಹಕಿಡಿಗಳು ★

ಈ ವರ್ಷವಾದರೂ ವಿಘ್ನೇಶ್ವರನ ಪೂಜೇನ ಭಾರತವು ಭಕ್ತಿಯಿಂದ ಮಾಡಿ, ಆಮೇಲೆ, ದೇಶದ ರಕ್ಷಣಾ ಕಾರ್ಯವನ್ನು ವ್ಯವಸ್ಥೆಗೊಳಿಸಿದರೆ, ಚೀಣೀಯರನ್ನು ಖಂಡಿತವಾಗಿಯೂ ಹೊರದೂಡಬಹುದು.

* * * *

ಸಚಿವ ಪದವಿ ಉಳಿಯುತ್ಯೋ ಅಥವಾ ಕಾಂಗ್ರೆಸ್ ಕೆಲಸಕ್ಕೆ ತಳ್ಳಿಬಿಡ್ತಾರೋ ಕೈ ನೋಡಿ ಕಣಿ ಹೇಳೇ ಕೊರವಂಜಿ, ಎಂದು ಸುಮಾರು ಕಾಗದಗಳು ಬಂದಿದೆ.

* * * *

ಎಣ್ಣೆ ಬರೋ ಹೊತ್ತಿಗೆ ಕಣ್ಣು ಮುಚ್ಚಿಕೊಂಡರು ಅಂದಹಾಗೆ, ಆ ಕಡೆ ಯುದ್ಧದ ಹೆದರಿಕೆ ಇರೋವಾಗ, ವ್ಯಾಪಾರ ಬಿರುಸಾಗಿರೋವಾಗ, ಇರೋ ಮಂತ್ರಿ ಪದವೀನ ಬಿಟ್ಟು, ಹಳ್ಳೀಗೆ ಹೋಗಿ ಸಂಸ್ಥೇನ ಬಿಗಿಮಾಡು ಅಂತಾರಲ್ಲ—ನ್ಯಾಯವೇನ್ರಿ ಎಂದು,

—ಇಸ್ತ್ರಿಯಾಗಿದ್ದ ಟೋಪಿಗಳೆರಡು ಮಾತನಾಡಿಕೊಂಡವಂತೆ.

* * * *

ಸಚಿವರ ಮನೆಗಳಿಗೆ ರಾಜೀವಪುರದಲ್ಲಿ ಕಳ್ಳರು ಹೊಕ್ಕೇ ಇಲ್ಲವಂತೆ.

(ಪೋಲೀಸ್ ವರದಿ)

—ಅವರಲ್ಲಿ ಕೂಡ ನಮ್ಮೋರು ತಮ್ಮೋರು ಅಂತ ಅಭಿಮಾನ ಇರುತ್ತೆ!!

* * * *

ನೆಹ್ರೂಜೀಯವರು ನಿದ್ರೆ ಮಾಡುವ ಮೊದಲು ರಾಮಸ್ಕಂಧಂ ಹನುಮಂತಂ ಎಂದು ಶ್ಲೋಕವನ್ನು ಪಠಿಸುವುದಿಲ್ಲವಂತೆ.

—ಅಂದರೆ ದುಸ್ಸ್ವಪ್ನ ಬೀಳಲೇಬೇಕು! ರಂಗೋ ಮಸಾನಿ, ಕೃಪಲಾನಿಶ್ಚ ಲೋಹಿಯಾ ಗೋಪಾಲನ್ ತಥಾ!

* * * *

ಅಪ್ಪಾ! ಅಪ್ಪಾ! ನಮ್ಮನೇಲೂ ಕಾಮರಾಜಾ ಸೂತ್ರಾನ ಆಚರಣೆಗೆ ತರೋಣ ಅಮ್ಮ ಮನೆ ಮಂತ್ರಿ ಆಗಲಿ, ನಾನು ರಾಜ್ಯಪಾಲ ಆಗ್ತೀನಿ ನೀನು ಸಾಮಾನು ತರೋ ಕೆಲಸ ನೋಡಿಕೋಪ್ಪಾ ಎಂದ ಕುಮಾರ ಕಂಠೀರವ.

ಒಳ್ಳೇದು ನೀನು ಕಲಿಸಮ್ಮ

ಋಷ್ಯ ಶೃಂಗರನ್ನು ತಂದೆಯ ಆಶ್ರಮದಿಂದ ಪುಸಲಾಯಿಸಿಕೊಂಡು ಶೃಂಗೇರಿ ಪಾರ್ಕಿನ ಹತ್ತಿರಕ್ಕೆ ಕರೆದುಕೊಂಡು ಬಂದರಲ್ಲ ಆ ಅಪ್ಸರೆಯರು. ಅವರೆಲ್ಲರೂ ಬಾಲ ತಪಸ್ವಿಗಳ ಹಾಗೆ, ಗರ್ಲ್ಸ್ ಗೈಡ್ಸ್ ತರಹ, ದರ್ಭೆಯ ಸಮ ಉಡುಪುಗಳನ್ನು ಧರಿಸಿ, ಅಜಂತಾದಲ್ಲಿ ತಲೆಕೂದಲನ್ನು ಮೇಲೆತ್ತಿ ಹೆರಳು ಕಟ್ಟಿಲ್ಲವೆ, ಹಾಗೆ ಕಟ್ಟಿ, ಅದಕ್ಕೆ ಮಲ್ಲಿಗೆ ಹೂವಿನ ದಂಡೇನ ಕಟ್ಟಿ, ಭಜನೆ ಮಾಡುತ್ತಾ ಬಂದು, ಋಷ್ಯ ಶೃಂಗರನ್ನು ಸುತ್ತುಗಟ್ಟಿ ಆತ್ಮಸಾಕ್ಷಾತ್ಕಾರ, ಬ್ರಹ್ಮ ಸಾಕ್ಷಾತ್ಕಾರ ಹೀಗೆಲ್ಲಾ ಒಲವಿನ ಪ್ರೇಮದ ಮಾತುಗಳನ್ನಾಡಿದರಂತೆ. ಎಲ್ಲರೂ ಸೇರಿ ಕ್ಯಾಂಪ್ ಫೈರ್ ಮಾಡುವ ರೀತಿ ಮಧ್ಯದಲ್ಲಿ ಬೆಂಕಿ ಹಾಕಿ, ಸುತ್ತಲೂ ಕುಳಿತು ಆಧ್ಯಾತ್ಮಿಕ ಸಂಭಾಷಣೆಗಳನ್ನು ನಡೆಸುತ್ತಿದ್ದರಂತೆ.

ಗುಂಪಿನ ಹೊರ ಅಂಚಿನಲ್ಲಿ ಅಪ್ಸರೆಯರ ಸಂಗಡದ ಮುಖಂಡಿಯರಿಬ್ಬರು ಕುಳಿತು ಮಾತನಾಡುತ್ತಿದ್ದರಂತೆ. ಅಗ್ನಿಕುಂಡದಿಂದ ದೂರವಿದ್ದ ಕಾರಣ ರಾತ್ರಿ ಚಳಿಯಾಗುತ್ತಿದ್ದುದರಿಂದ, ಒಬ್ಬರ ಕೈಯನ್ನೊಬ್ಬರು ತಿಕ್ಕುತ್ತಾ ಪಿಸುಮಾತು ಮುಂದುವರಿಸುತ್ತಾ, ಮೊದಲನೆಯಾಕೆ

" ಎಳೆಯ ಮಗುವಿನ ಹೃದಯ ಕಣೆ ಇದಕ್ಕೆ — ಇದಕ್ಕೊಂದೂ ತಿಳಿಯದು " ಎಂದಳಂತೆ.

" ಸುಮ್ಮಗೆ ಬೆಳೆದಿದೆ, ಈಚಲ ಮರದ ಹಾಗೆ ಹೊರವಾಗಿ ಕುಚ್ಚು ಬೆಳೆಸಿಕೊಂಡು ಬೆಳೆದಿದೆ. ಒಂಟಿ ಸುಂಟರಗಾಳಿ ತರಹ. ಒಂದೇ ಆಶ್ರಮದಲ್ಲಿ ತಂದೆ ಜತೆಗೆ ಬೆಳೆದಿದೆ, ಏನೊಂದೂ ತಿಳಿಯದು. ಬೆರಗು ಬೆರಗಾಗಿ ಎಲ್ಲೆಲ್ಲೋ ದೃಷ್ಟಿ ಹಾಯಿಸುತ್ತಿತ್ತು, ಕಣೆ" ಎಂದು ಎರಡನೆಯವಳು ಹೇಳಿದಳಂತೆ.

"ಅವರಪ್ಪನ ಆಶ್ರಮದಲ್ಲಿ ಹತ್ತಿರ ಹೋಗಿ ಕೂತುಕೊಂಡಾಗ, ಮೈಗೆ ಸ್ವಲ್ಪ ತಾಕಿದ್ದಾಗ ಮಕ್ಕಳ ಹಾಗೇ ನಗ್ತು ಕಣೆ! ಮನಸ್ಸು ಗಟ್ಟಿಮಾಡಿ, ಜೋರಾಗಿ ಬಡೀತಿದ್ದ ನಾಡಿಯ ತಾಳಕ್ಕೆ ಸರಿಯಾಗಿ ರಾಮ ರಾಮ ಅಂತ ಭಜನೆ ಮಾಡಬೇಕಾಯ್ತು ಕಣೆ" ಎಂದಳು ಮೊದಲು ಮಾತು ಶುರುಮಾಡಿದ ಆಕೆ.

"ಒಳ್ಳೇದು ಕೆಟ್ಟದು, ಇದನ್ನೆಲ್ಲಾ ನಾವು ಕಲಿಸಬೇಕು ಕಣೆ" ಎಂದಳು ಎರಡನೇ ಆಕೆ.

"ನೀನು ಒಳ್ಳೇದನ್ನ ಕಲಿಸಮ್ಮ. ಮಿಕ್ಕಿದ್ದನ್ನೆಲ್ಲಾ ನಾ ಕಲಿಸ್ತೀನಿ" ಎಂದಳು ಮೊದಲಾಕೆ.

"ನೋಡಿದೆಯಾ? ಸಿಕ್ಕಿದ್ದು ದಕ್ಕುಕ್ಕೆ ಮುಂಚೇನೇ ವ್ಯವಹಾರ ಹೂಡ್ತೀಯಲ್ಲ!" ಅಂತ ರಾಗ ತೆಗೆದಳಂತೆ ಎರಡನೆ ಆಕೆ. — ಬೇಕಾದರೆ ಹಂಚಿಕೊಳ್ಳೋಣ ಕಣೆ ಎಂದು ಉದಾರತೆಯಿಂದ ಸೇರಿಸಿದಳಂತೆ.

ಚಿಂತಯಾಮಿ ತ್ವದಾನನಂ

(ಅ. ಕ. ವಿ. ಪ್ರೇ. ಪ)

ಈಗ ಈ ಪ್ರಸಂಗವನ್ನು ಕುರಿತು ಬರೆಯಲು ಅಭ್ಯಂತರವಿಲ್ಲ

ಅ ಕ. ವಿ. ಪ್ರೇ. ಪದ ಅಧಿವೇಶನಗಳು ಇತ್ತೀಚೆಗೆ ವಿರಳವಾಗಿವೆ ಅಧಿವೇಶನ ಗಳಿರಲಿ, ಅಂತರಂಗದ ಸಮಾಲೋಚನೆಗಳೂ ಅಪರೂಪಕ್ಕೊಮ್ಮೆ ನಡೆಯುತ್ತಿವೆ. ಸಾರ್ವಜನಿಕರಿಂದ ಸಹಾಯವಿಲ್ಲದಿದ್ದರಷ್ಟೇ; ಅವರಿಂದ ಮನ್ನಣೆಯೂ ಬೇಕಿಲ್ಲ; ಎಂಬಿವೇ ಮೊದಲಾದ ನಿಲುವಳಿಗಳನ್ನು ಹೊಂದಿದ ಈ ಪರಿಷತ್ತಿಗೆ ಹೀಗಾಗಲು ಕಾರಣವೇನು? ಜನಕ್ಕೆ ತತ್ವನಿಷ್ಠೆ ಕಡಮೆಯಾದುದೇ ಇದಕ್ಕೆ ಕಾರಣವೆಂದು ನಾವು ಮತ್ತೆ ಹೇಳಬೇಕೇ?

'Every town a peyton place!' ಎಂಬ ರೀತಿಯ ಪರಿವರ್ತನೆಯೂ, ಅಧಿಕಾರ ಸ್ಥಾನಗೌರವಗಳನ್ನು ಮರೆತು, ಬೀದಿ ನಾಯಿಗಳಂತೆ ವರ್ತಿಸುವ ಮನೋಭಾವವೂ, ಸಾರ್ವತ್ರಿಕ ಸಾಕ್ಷರತೆಯ ಪ್ರಸಾರ ನಡೆದು ಮೌಲ್ಯಾರ್ಥ ಜಿಜ್ಞಾಸೆಯ ಲಯವೂ ಉಂಟಾದ ಈ ಕಾಲದಲ್ಲಿ ಕ್ರಿಸ್ಟೀನ್ ಕೀಲರ್ ಪ್ರಸಂಗದಲ್ಲಿ ಉತ್ಸುಕತೆಯೂ; ಡಾ॥ ವಾರ್ಡ್, ಕಾಮಕಲ್ಪದ ಪುನರುತ್ಥಾಪಕನೆಂದು ಬರೆಯುವುದನ್ನು ಓದುವ ಫಲವೂ ನಮಗೆ ಲಭಿಸಿದುದು ಸಾಲದೇ! ವಿಶ್ವ ಪ್ರೇಮ ಪರಿಷತ್ತೊಂದು ಗಂಡು ಹೆಣ್ಣಿನ ನಂಟು, ಗಂಟುಗಳನ್ನು ಅಂಟುಹಾಕಲೆಂದು ಸಮಾವೇಶಗೊಂಡಾಗ 'ಪರಿಸ್ಥಿತಿ ಆಶಾದಾಯಕವಾಗಿದೆ' ಎಂಬರ್ಥದ ಹೇಳಿಕೆಯೊಂದು ಹೊರಟಿತಂತೆ! ಗಂಡು ಹೆಣ್ಣುಗಳ Positive ಆಗಿರಬೇಕೆಂದು ಹೇಳಹೊರಟವರೆಲ್ಲ ತಾವು ಮಹಾನುಭಾವರೆಂದು ನಿಸ್ಸಂಶಯವಾಗಿ ನಂಬಿರುವರಂತೆ!!

ಪರಿಸ್ಥಿತಿ ಹೀಗಿರುವಲ್ಲಿ, ಇತ್ತೀಚೆಗೆ ಬೆಣ್ಣೆಯ ದರದಲ್ಲಿ ತೀವ್ರಾಸಕ್ತಿ ವಹಿಸಿದ್ದ ತಥಾಗತನು ಜನತಾ ಸ್ಟೋವ್ ಬತ್ತಿ, ಕಡ್ಡಿ ಚಾಪೆ, ಬಟಾಣಿಕಾಳು ಮತ್ತು ತುರಿಮಣೆಗಳತ್ತ ತನ್ನ ಆಸಕ್ತಿಯನ್ನು ಹರಿಬಿಟ್ಟರೆ ಬೇಡವೆನ್ನುವವರು ನಾವಲ್ಲ. ಹಿಂದಿದ್ದ ಕಾರ್ಯದರ್ಶಿ ಮನೆ ಬಾಡಿಗೆ ಕೇಸೊಂದರಲ್ಲಿ ಫಿರ್ಯಾದಿಯಾಗಿ, ಆ ಜಾಗಕೆ ನಿಯಮಿತನಾದ ಪುಡಿ ಚಿಲ್ರೆ ಭಗವದ್ಗೀತೆಯನ್ನು ಓದುತ್ತಿರುವನೆಂದ ಮೇಲೆ ನಾವುಗಳೆಲ್ಲಾ ಧಮ್ಮಪದದ ಪಾರಾಯಣವನ್ನೇಕೆ ಮಾಡಬಾರದೆಂದು ತೀವ್ರವಾಗಿ ಆಲೋಚಿಸುತ್ತಿರುವುದರಲ್ಲಿ ಏನು ತಪ್ಪಿದೆ?

ಅಷ್ಟಗ್ರಹ ಕೂಟಕ್ಕೆ ಪೂರಕವಾಗಿ ಶೋಭಕೃತುವಿನಲ್ಲಿ ಗ್ರಹಣ, ಅನಾವೃಷ್ಟಿ, ಕ್ಷಯಮಾಸಗಳು ಬಂದು—ಈ ವರ್ಷ ವಿವಾಹದ ಮುಹೂರ್ತಗಳೇ ಕಂಡುಬರುವುದಿಲ್ಲ—ಎಂದು ಪಂಚಾಂಗ ಕರ್ತರು ಬರೆದಿದ್ದರೂ, ತುರ್ತು ಪರಿಸ್ಥಿತಿಯ ದೆಸೆಯಿಂದ ಭಾರತೀಯರು ದುಂದುವೆಚ್ಚ ಮಾಡಬಾರದೆಂಬ ತತ್ವ ಎಲ್ಲರಿಂದಲೂ ತತ್ವಶಃ ಸ್ವೀಕೃತವಾಗಿದ್ದರೂ, ಈ ವರ್ಷ ರಂಗು ರಂಗಿನ ದಿಬ್ಬಣಗಳು ಅದ್ಧೂರಿಯಿಂದ ಹೊರಟು, ಬೆಂಡು ಬಜಂತ್ರಿಗಳು ಕರ್ಣಕೋಲಾಹಲವಾಗಿ ಬಾಜನೆಮಾಡಿ ಅನಂಗನ ಬಲೆಗೆ ಗಂಡು ಹೆಣ್ಣುಗಳು ಶತಸಹಸ್ರ ಸಂಖ್ಯೆಯಲ್ಲಿ ಬಿದ್ದೇ ಬಿಟ್ಟವು

ಶ್ರಾವಣದಲ್ಲಿ ಶುಕ್ರಾಸ್ತವಾಗದಿದ್ದರೆ ಮತ್ತಷ್ಟು ಮೃಗಗಳು ಬಲೆಗೆ ಬೀಳುತ್ತಿದ್ದವೋ ಏನೋ? ಶುಕ್ರಾಸ್ತದ ಜೊತೆಗೆ ಅನಾವೃಷ್ಟಿಯೂ ಬಲಿತು ಗಾಳಿಯಲ್ಲಿ ಏರುಪೇರಾಗಿ ಒಂದು ವಿಧವಾದ ಸಂಕಟಾನುಭವ ಎಲ್ಲರಿಗೂ ಆಗುತ್ತಿದೆ.

ಮಳೆ ಮೋಡಗಳು ಪಶ್ಚಿಮದ ಮೂಲೆಯಲ್ಲಿ ಏಳೋಣವೋ ಬೀಳೋಣವೋ ಎನ್ನುತ್ತಿವೆ. ಅಷ್ಟಮಿಯ ಚೀಣ ಚಂದ್ರ ಬಿಳಿ ಮೋಡಗಳ ಮರೆಯಲ್ಲಿ ತಿಣುಕುತ್ತಿದ್ದಾನೆ. ಸರ್ಕಲ್ ರೆಸ್ಟೋರೆಂಟಿನ ಮೂರನೆಯ ಮಹಡಿ, ತ್ಯಕ್ತ ರಂಗಸ್ಥಳದಂತೆ ಜನಹೀನವಾಗಿದೆ. ಸೋಫಾ ಒಂದರಮೇಲೆ ಮುಂಗಾಲಿನ ಮೇಲೆ ಭಾರ ಹಾಕಿ ಕುಳಿತು ಚಿಂತಾಮಗ್ನನಾದ ತಥಾಗತನು ಸಿಗರೇಟನ್ನೆಳೆಯುತ್ತಿದ್ದಾನೆ. ಪುಡಿಚಿಲ್ರೆ "ದಿ ಡೋರ್ ವಿತ್ ದಿ ಸೆವೆನ್ ಲಾಕ್ಸ್" ಎನ್ನುವ ಥಾಡಸೀ ಪತ್ತೇದಾರಿ ಕಥೆಯನ್ನೋದುತ್ತಾ ತಥಾಗತನ ಮುಂದಿನ ಸೋಫಾದಲ್ಲಿ ಹಿಂದಕ್ಕೊರಗಿ ಕುಳಿತಿದ್ದಾನೆ. ಅರೆ ಬೆಳಕಿನಲ್ಲಿ ಅಸ್ಪಷ್ಟವಾದ ರೇಡಿಯೋ ಗಾನ ಕೇಳಿ ಬರುತ್ತಿದೆ.

ತಥಾಗತ ಮೇಲೆದ್ದು ನಿಂತು ರಸ್ತೆಯ ಕಡೆ ನೋಡಿದ. 'ಪುಡಿಚಿಲ್ರೇ ನೋಡಲ್ಲಿ, ಆ ವ್ಯಕ್ತಿಯನ್ನು' ಎಂದ. ಪುಡಿಚಿಲ್ರೆ ಎದ್ದು ನಿಂತು ನೋಡಿದ. ರಸ್ತೆಯ ನಡುವಿನ ಟ್ರ್ಯಾಫಿಕ್ ಐಲೆಂಡಿನಲ್ಲಿ, ಎಡಗೈಲಿ ಕೊಡೆಯನ್ನು ಹಿಡಿದು ಬಲಗೈ ಬೆರಳತುದಿಯಲ್ಲಿ ಸೀಗರೇಟನ್ನು ಸಿಕ್ಕಿಸಿ ನಿಂತ ವ್ಯಕ್ತಿವಿಶೇಷವೊಂದು ನಿಂತಿತ್ತು. ಲೆವೆಲ್ ಕ್ರಾಸಿನಲ್ಲಿ ಕರ್ಕಶ ಶಬ್ದ ಮಾಡುತ್ತಾ ಎಕ್ಸ್‌ಪ್ರೆಸ್ ಗಾಡಿ ಹಾದು ಹೋಯಿತು. ಸಿನ್‌ಸಿನ್ನಾಟಿ ಸರ್ಕಲ್ ಕಡೆಯಿಂದ ಗೌರವರ್ಣದ, ನಡುಹರೆಯದ, ಸ್ನಿಗ್ಧ ದೇಹರುಚಿಯ ತರುಣಿಯೊಬ್ಬಳು ಹರಿಣಿಯಂತೆ ನಡೆದು ಹೋದಳು. ಆ ವ್ಯಕ್ತಿ ಸಿಗರೇಟನ್ನು ರೈಲು ಹೋದ ದಿಕ್ಕಿಗೆಸೆದು ರೆಸ್ಟೋರೆಂಟಿನ ಕಡೆಗೆ ಬಂತು.

"ಆವಳಾರು?" ಎಂದ ಪುಡಿಚಿಲ್ರೆ.

"ಚಂದ್ರಮುಖಿ" ಎಂದರು ಅಧ್ಯಕ್ಷರು.

"ಇವನಾರು?"

“ ಇವನು ಮೂಢಾತ್ಮನಾದ ನರಗುರಿ ;

“ ಮೂಢನೆಂದರೆ ”

“ ಒಲಿದವಳ ಬಿಟ್ಟು, ಒಲ್ಲದವಳಿಗೆ ಹಲುಬುವವನು, ಇಳೆಯೊಳಗೆ ಮೂಢಾತ್ಮ ”

“ ಒಲಿದವಳು ಯಾರು ? ”

“ ಈ ನರಗುರಿಯನ್ನು ಯಾರಾದರೂ ಎಂದಾದರೂ ಒಲಿದಿದ್ದರೇ ಒಲಿಯುವರೇ ಎಂಬುದು ಸಂಶಯಾಸ್ಪದ ? !

“ ಒಲ್ಲದವಳು ಯಾರು ? ”

“ ಪ್ರೇಮ ”

ಅಷ್ಟುಹೊತ್ತಿಗೆ ಆ ವ್ಯಕ್ತಿವಿಶೇಷವು ಮೂರನೆಯ ಮಹಡಿಗೆ ಹತ್ತಿ ಬಂದು, ಅ.ಕ.ವಿ.ಪ್ರೇ.ಪದ ಅಧ್ಯಕ್ಷರನ್ನು ವಂದಿಸಿ,

“ಭನ್ತೇ” ಎಂದಿತು

“ಆಶ್ಚರ್ಯ!” ಎಂದರು ಅಧ್ಯಕ್ಷರು.

“ಆಶ್ಚರ್ಯ” ಎಂದು ಆ ನರಗುರಿ ಒಪ್ಪಿದ.

ಪುಡಿ ಚಿಲ್ರೆ “ಇದೇನು ತಥಾಗತ, ಈ ನರಗುರಿಯ ಮುಖದಲ್ಲಿ ಸೆರಾಜುದ್ದೀನ್ ಹೆಸರನ್ನು ಕೇಳಿದಾಗ ಮಾಳವೀಯರ ಮುಖದಲ್ಲಿ ಕಂಡುಬರಬಹುದಾದಂತಹ ಮುಖಭಾವವಿದೆ.” ಎಂದು ಕೇಳಿದ.

ಅಧ್ಯಕ್ಷರು “ಹಾಗಲ್ಲ, ಕ್ರಿಸ್ಟೀನ್ ಕೀಲರ್ ಎಂದೊಡನೆ ವ್ಯಾಲೆರಿ ಹಾಬ್ಸನ್ನಳ ಮುಖದಲ್ಲಿ ಕಂಡುಬರುವ ಭಾವ ಎಂದರೆ ಹೆಚ್ಚು ಸಮಂಜಸವಾದೀತು ” ಎಂದರು.

ಪುಡಿ ಚಿಲ್ರೆ “ಆಶ್ಚರ್ಯ” ಎಂದ.

ಆ ನರಗುರಿ “ಏನು ?” ಎಂದು ಕೇಳಿತು.

ಪುಡಿ ಚಿಲ್ರೆ ‘Things in general’ ಎಂದು ನುಣುಚಿಕೊಂಡ.

ಅಧ್ಯಕ್ಷರು “ ಜೀವನವೆನ್ನುವ ಕಾಡಿನಲ್ಲಿ, ಜೀವರುಗಳೆಂಬ ಮೃಗಗಳನ್ನು ಪ್ರೇಮವೆನ್ನುವ ದೀಹಾಮೃಗವನ್ನೊಡ್ಡಿ ದುಃಖವೆನ್ನುವ ಬಲೆಗೆ ಕೆಡಹುತ್ತಿದ್ದಾನೆ” ಎಂದರು.

ನರಗುರಿ "ದೂರದಿಗಂತದಲ್ಲಿ ಕ್ರಮೇಣ ಕ್ಷೀಣವಾಗುತ್ತಿರುವ ಆ ರೈಲಿನ ದನಿಯೊಡನೆ .... " ಎಂದಾರಂಭಿಸಿದ.

ಪುಡಿ ಚಿಲ್ರೆ "ಮುಂದಿನದನ್ನು ನಾನು ಬಲ್ಲೆ ...ಆ ದನಿಯೊಡನೆ ನಿನ್ನ ಆಶಾಮಂದಿರ ಭಗ್ನವಾಯಿತು. ಬರಿ ಬಯಕೆ ಕಗ್ಗಂಟಾಯ್ತು. ಜೀವನ ಅಸಹನೀಯ ಯಾತನೆಯಾಯ್ತು. ತಳಕ್ಕೊತ್ತಿದರೂ ಮೇಲೇರುವ ಈಜು ಬುರುಡೆಯಂತೆ ನಿನ್ನ ... "

ನರಗುರಿ "Bunkum........Bosh.... ..." ಎಂದ.

ಪುಡಿ ಚಿಲ್ರೆ "ನನ್ನದು ತಪ್ಪಿರಬಹುದು. ಆದರೆ ಇಲ್ಲಿಗೆ ಬರುವ ಜನ ಸಾಧಾರಣವಾಗಿ ಇಂತಹ ಮಾತುಗಳನ್ನೇ ಹೇಳುವುದರಿಂದ ನಾನೂ ಹೀಗೆ ಊಹಿಸಿದೆ. ನೀನು ಚಂದ್ರಮುಖಿಯನ್ನು ಪ್ರೀತಿಸಿ........"

ನರಗುರಿ "ಭನ್ತೇ, ಇದೇಕೆ ಇಂತಹ ಶಿರೋಯಾತನೆಯನ್ನು ನೀನು ಜೊತೆಗೆ ಕಟ್ಟಿಕೊಂಡೆ? ಅಯ್ಯಾ ಕಾರ್ಯದರ್ಶಿ ಸ್ವಲ್ಪ ಬಾಯಿಗೆ ಬಟ್ಟೆ ತುರುಕಿಕೋ" ಎಂದ.

ಅಧ್ಯಕ್ಷರು "ಭಿಕ್ಖೂ, ನೀನೇ ಅರಿತಂತೆ ಈ ಊರಿನ ಜನರು ಇತ್ತೀಚೆಗೆ ಏನನ್ನು ಬೇಕಾದರೂ ಪ್ರೇಮವೆಂದು ಭಾವಿಸುತ್ತಿದ್ದಾರೆ. ಹಾಗಿರುವುದರಿಂದ ಪುಡಿ ಚಿಲ್ರೆ ನಿನ್ನ ಜೊತೆ ಹೀಗೆ ಮಾತಾಡಿದರೆ ನೀನು ರೇಗಬಾರದು. ಈಗೇಕೆ ಬಂದೆ?" ಎಂದು ಕೇಳಿದರು.

"ಭನ್ತೇ, ನಾನು ಪ್ರೀತಿಸಿದ್ದು ಪ್ರೇಮ ..." ಎಂದಾರಂಭಿಸಿದ ನರಗುರಿ.

"ಆದುದರಿಂದ ನಿನ್ನಲ್ಲಿರುವ, ಅವಳಲ್ಲಿರಬಹುದೆಂದು ನೀನು ಊಹಿಸಿದ ಗುಣವನ್ನು ಆರಾಧಿಸಿದ ನೀನು ಪ್ಲೆಟಾನಿಕ್ ಪಂಥದ ..."

ಹೀಗೆಂದು ಮತ್ತೆ ಆರಂಭಿಸಿದ ಪುಡಿ ಚಿಲ್ರೆಯ ಮಾತು.

ಅಧ್ಯಕ್ಷರ ಮತ್ತು ನರಗುರಿಯ ಕಣ್ಣುಗಳ ದೃಷ್ಟಿಯ ಪ್ರಭಾವದಿಂದ ಅಲ್ಲಿಗೇ ನಿಂತುಹೋಯಿತು.

"ಯಾರು ಅವಳು ಪ್ರೇಮ ?" ಎಂದು ಅಧ್ಯಕ್ಷರು ಕೇಳಿದರು.

ಪುಡಿ ಚಿಲ್ರೆ ಬೇಸರಗೊಂಡವನಂತೆ ಎದ್ದು ನಿಂತು, "ಅಯ್ಯೋ ಅಷ್ಟು ತಿಳಿಯದೇ ? ಅವಳೇ ? ಪ್ರೇಮವೇ ತಥಾಗತ, ಮೊಹಬತ್, ಉಲ್ಫತ್, ಇಷ್ಕ್ ಲವ್" ಎಂದು ಕಟಕಟೆಯ ಕಡೆ ಧಾವಿಸಿ ಹೋದ.

"Inspector for Abolition of British system of weights and Measures ರ ಮಗಳೇ? ಗೌರವರ್ಣ. ಎರಡು ಜಡೆ, ಗಿಡ್ಡ ಬ್ಲೌಸ್, ಗರ್ಲ್ಸ್ ಗೈಡ್, ಸೈಕಲ್ ಪ್ರಿಯೇ?" ಎಂದು ಅಧ್ಯಕ್ಷರು ಕೇಳಿದರು.

"ಮತ್ತು ನರಗುರಿ ಪ್ರೇಯಸಿ" ಎಂದ ನರಗುರಿ.

"ಚಂದ್ರಮುಖಿಯ ಸ್ನೇಹಿತೆಯಲ್ಲವೇ?" ಎಂದರು ಅಧ್ಯಕ್ಷರು.

"ಹೌದು!"

"ಮೊನ್ನೆ ಆಷಾಢದಲ್ಲಿ Inspector for Maximum Headaches ನನ್ನು ಮದುವೆಯಾದಳಲ್ಲ."

"ಮದುವೆಗೆ ನಾನೂ ಹೋಗಿದ್ದೆ. ಸೇಲಂ ಬಾಳೆಹಣ್ಣು ಕೊಟ್ಟರು!" ಎಂದ ಪುಡಿ ಚಿಲ್ರೆ.

"ನಾನೂ ಹೋಗಿದ್ದೆ—ಯಾರೂ ಕರೆದಿರಲಿಲ್ಲ" ಎಂದ ನರಗುರಿ.

"ಸರಿ ಅದಕ್ಕೇಕೆ ನೀನು ಚಿಂತಿಸಬೇಕು ಹೋಗಿ ಕಂಬಳಿ ಹೊದ್ದು ಮಲಗಿಕೋ" ಎಂದ ಪುಡಿಚಿಲ್ರೆ.

" Bye the Bye ಈ ದಿನ ಮಾರ್ಕೆಟ್‌ನಲ್ಲಿ ಕಂಬಿ ಚಂದ್ರವನ್ನು ಖರೀದಿ ಮಾಡಲೇ ಇಲ್ಲ. ಬುಕ್ಕಿಟ್ಟು ಪಾವಿಗೆ ಮೂವತ್ತೇಳು ಪೈಸೆ. ಐದರಂತೆ ಮಾಡಿ ಐವತ್ತು ಗ್ರಾಂ ತಂದೆ" ಎಂದರು ಅಧ್ಯಕ್ಷರು.

ಪುಡಿ ಚಿಲ್ರೆ "ಬೆಣ್ಣೆ ಮೂರೂ ಮುಕ್ಕಾಲರಿಂದ ನಾಲ್ಕರವರೆಗೆ ನಡೆಯಿತು" ಎಂದ.

ನರಗುರಿ ಸಿಗರೇಟೊಂದನ್ನು ತೆಗೆದು, ಮೂರು ಸ್ಪೆಷಲ್ ಕಾಫಿಗಳಿಗೆ ಆರ್ಡರು ಕೊಟ್ಟು, ಸಿಗರೇಟು ಹೊತ್ತಿಸಿ, ಎಳೆದು ಹೊಗೆ ಬಿಡುತ್ತಾ.

"ತಥಾಗತ, ಕಾವ್ಯವು ಮನೋ ವ್ಯಾಪಾರಗಳ ಅಭಿವ್ಯಕ್ತಿಯಲ್ಲವೇ?" ಕಲೆಯು ಪರಮೋನ್ನತ ಸಾಧನೆಯಲ್ಲವೇ?

ಇದನ್ನು ಕೇಳು.

> ನಿನ್ನೊಂದೆ ಚಿಂತೆಯಲಿ ಬಾಳಾಯ್ತು ಕಾಳು
> ನೆನೆದಂತೆ ಮಾರುವುದು ಮನದ ಈ ಗೋಳು
> ಇಲ್ಲೆ ಇರು, ದೂರಕ್ಕೆ ಸಲೆ ತೊಲಗಿ ಹೋಗು
> ಇನ್ನಾದರೂ ಬಾಳು, ಬಿಟ್ಟು ಬರಿಸೋಗು

ಹೇಗಿದೆ ತಥಾಗತ?" ಎಂದ.

ಪುಡಿಚಿಲ್ರೆ ಇದನ್ನು ಕೇಳಿದಾಗ ಕೆಲವು ಪ್ರಶ್ನೆಗಳು ಉದ್ಭವಿಸುತ್ತವೆ. ಶಬ್ದ ಕೋಶದಲ್ಲಿ ಕಾಳು– grain ಎಂದಿದೆ, ಬಾಳು ಕಾಳಾಗಿ ಹೋಗುವುದು ಸಾಧ್ಯವೇ? ಅಲ್ಲದೆ ಉದ್ದ ಅಗಲ ಸಲೆ ಎನ್ನುವ ವಿಷಯ ಸುಸ್ಪಷ್ಟವಾಗಿದೆ. ಯಾರು ಸಲೆಯನ್ನು ಎಂದರೆ Area ವನ್ನು ತೊಲಗಿ ಹೋಗಬೇಕು? ಅವರು ಘನವನ್ನೇಕೆ ತೊಲಗಬಾರದು? ಮಿತ್ರಾ ನೀನು ಒಗಟುಗಳನ್ನು ಬಿಡು. ಭನ್ತೇ ನೀನಾದರೂ ಕುದಿಯುವ ನನ್ನ ಕುತೂಹಲಕ್ಕೆ ತಂಪನ್ನೆರಚು. ಎಂದು ಕೇಳಿದ.

ತಥಾಗತ ಕಾಫಿಯನ್ನು ಹೀರಿ, ಸಿಗರೇಟನ್ನು ಹೊತ್ತಿಸಿ ಆರಂಭಿಸಿದ.

"ಪ್ರೇಮ, ಚಂದ್ರಮುಖಿಯ ಗೆಳತಿ. ನನಗೂ ಪರಿಚಿತಳು. ಅವಳು ಮುಗ್ಧೆ, ಮೊದಲ ನೋಟಕ್ಕೆ. ಸ್ನೇಹಾರ್ದಸ್ವಭಾವೆ. ಗಾಂಧೀಯುಗದ ಅಂತ್ಯದಲ್ಲಿ ಹುಟ್ಟಿದ ಅವಳಿಗೆ ಆದರ್ಶವೆಂಬ ಶಬ್ದ ಅರ್ಥವಾಗಿತ್ತೇ ಎನ್ನುವುದು ಸಂಶಯಾಸ್ಪದ. ಆದರದನ್ನು ಹೇರಳವಾಗಿ ಬಳಸುತ್ತಿದ್ದಳು ಎಲ್ಲರೂ ತನಗಾಗಿ ಮರುಗಬೇಕು. ತಾನಾದರೋ ಎಲ್ಲರನ್ನೂ ಮರುಗುವಂತೆ ಮಾಡಬೇಕು ಅನುಭೂತಿ ತನಗೆ ಸಿಕ್ಕಬೇಕು. ಅದಕ್ಕೆ ಪಾತ್ರಳಾಗಲು ತಾನು ಮಾತನ್ನು ಸುರಿಯಬೇಕೇ ವಿನಃ ಕೃತಿ ಶೂನ್ಯಳಾಗಬೇಕು ಎನ್ನುವುದೇ ಅವಳ ಆದರ್ಶವಿರಬೇಕು. Inspector for Abolition etc. ರವರಿಗೆ ಪರಿಚಿತನಾದ ನಾನು ಅವಳಿಗೆ ಒಮ್ಮೆ ಸೀಟು ಕೊಟ್ಟು ಸ್ಥಾನಭ್ರಷ್ಟನಾಗಿ ವೆಸ್ಟ್ಸೂರಿನಿಂದ ಮುಗಿಲುಹಳ್ಳಿಯವರೆಗೆ ನಿಂತೇ ಬಂದಿದ್ದೆ. ಕುಸುಮ ಕೋಮಲೆ ಅವಳು; ಅವಳ ಹೃದಯ ಕಾಡು ಬಂಡೆಯಷ್ಟು ಕಠಿಣ."

"ಸ್ತ್ರೀನಿಂದನೆ ನಿಂದನೀಯವಲ್ಲವೇ" ಎಂದ ಪುಡಿಚಿಲ್ರೆ.

"ಅವಳು ಮದುವೆಯಾಗಲೇ ಇಲ್ಲ. ದಿನದಿನ ಕಳೆದು ಯುಗ ಯುಗ ಮುಗಿಯೇ, ಅವಳಿನ್ನೂ ಅವಿವಾಹಿತಳೇ ಆಗಿದ್ದಳು."

ಚಂದ್ರಮುಖಿಯೂ ಕೂಡ ಅವಿವಾಹಿತಳಲ್ಲವೇ?" ಎಂದ ಪುಡಿ ಚಿಲ್ರೆ.

"ನಿನಗೇ ತಿಳಿದಂತೆ, ಚಂದ್ರಮುಖಿ ಜರಡಿ ಹಿಡಿದಮೇಲೆ ಈಗ ತಾತ್ವಿಕವಾಗಿ ವಿವಾಹಕ್ಕೆ ಒಪ್ಪಿಗೆ ಕೊಟ್ಟಿದ್ದಾಳೆ. ಇವರಿಗೆ ಏನಾಗಿತ್ತೋ ಆ ಅರ್ಹತನೇ ಬಲ್ಲ. ವಿಫಲ ಪ್ರೇಮ, ಪುರುಷದ್ವೇಷ, ಆದರ್ಶ ಮತ್ತು ತಿಮರು ಇವುಗಳಲ್ಲಿ ಯಾವುದರ ದೆಸೆಯಿಂದ ಇವರು ಹೀಗಾದರೋ ಏನೋ! ನನಗೆ ತಿಳಿದಂತೆ ಪ್ರೇಮಾಳ ಕೇಸು The case of eternal Hyperbola" ಎಂದ ತಥಾಗಥ.

"ಹಾಗೆಂದರೆ?" ಎಂದು ನರಗುರಿ ಕೇಳಿತು.

"ಹೈಪರ್ ಬೊಲಾದ ಅಕ್ಸಿಸ್ ಪ್ರೇಮ ಎಂದರೆ ನೇಹ ಎಂದರೆ ಅನುರಾಗ ವೆಂದಿಟ್ಟುಕೊಳ್ಳೋಣ. ಅದರ ಒಂದು ಕಡೆಯು ವಕ್ರರೇಖೆಯಲ್ಲಿ ಈ ನರಗುರಿ ಖಾಯಂ ಆಗಿ ನೇತು ಹೊಡೆಯುತ್ತಿದ್ದ ಅಕ್ಷವನ್ನು ಮುಟ್ಟಲೂ ಇಲ್ಲ. ಮುಟ್ಟುವ ಬಯಕೆಯೂ ಇರಲಿಲ್ಲ, ಇನ್ನೊಂದು ವಕ್ರರೇಖೆಯಲ್ಲಿ ಅಸಂಖ್ಯ ವರಗಳು ಪ್ರೇಮಾರ್ತರು, ಆಗಂತುಕರು ಬಂದು ಹ್ಯಾಲಿಯ ಧೂಮಕೇತುವಿನಂತೆ ದಿಗಂತದಲ್ಲಿ ಮಾಯವಾದರು ಅವರಲ್ಲೊಬ್ಬನಾದ ಈ Inspector for Maximum Headaches ಅದೆಂತೆಂದರಿಯೆನ್, ಇವಳ ಕೈ ಹಿಡಿದ."

ನರಗುರಿ "ಹೌದು, ಶಹಭಾಸ್ ತಥಾಗತ ನಿನ್ನ ವರ್ಣನೆ ಮನನೀಯ, ಹೃದ್ಯ ಸತ್ಯ. ಆದರೆ ನಾನು ಅದೆಂತೆಂದರಿವೆಂ. ಹೈಪರ್ ಬೊಲಾದ ಆ ಅಕ್ಷ ಪ್ರೇಮ. ಅಲ್ಲ ಈ ನಮ್ಮ ಪ್ರೇಮ ... ..."

ಪುಡಿ ಚಿಲ್ರೆ ಸೀಟಿ ಹೊಡೆದು "ಅರೆ, ನೀನೂ ತಥಾಗತನೂ...."

ತಥಾಗತನು "Shut up ಪುಡಿ ಚಿಲ್ರೆ, you stand censured" ಎಂದರು.

ನರಗುರಿ ಮುಂದುವರಿಸಿದ "ಇವಳ ಮನಸ್ಸು ತುರಿಮಣೆಯಿದ್ದ ಹಾಗೆ. ಪ್ರೇಮ ಜರ್ಝರಿತಳಾದ ಪ್ರೇಮಳ ಮನಸ್ಸು ಛಿದ್ರಛಿದ್ರವಾಗಿ ತುರಿಮಣೆಯಂತಿತ್ತು. ಅವಳನ್ನು ವರಿಸ ಬಂದವರು, ಮೈ ತರೆಸಿಕೊಂಡು ಓಡಿಹೋದರು. ಕೊನೆಗೆ ಈ Inspector for Maximum Head Aches ಅಲ್ಲಿ ಸಿಕ್ಕಿಬಿದ್ದ. ಅಂತೂ ಯುಗವೊಂದರ ಪರಿಸಮಾಪ್ತಿಯಾಯ್ತು. ಅವಳೊಂದು ದಿನ ಒಂದು ಮುಖಭಾವವನ್ನು ವ್ಯಕ್ತಪಡಿಸುತ್ತಾ ನನ್ನನ್ನು ನೋಡಿದ್ದಳು. ಆ ಮುಖ ಒಮ್ಮೊಮ್ಮೆ ನನ್ನನ್ನು ಕಾಡುತ್ತದೆ. ಆ ಚಿಂತೆ ಒಮ್ಮೊಮ್ಮೆ ನನ್ನನ್ನು ಆವರಿಸುತ್ತದೆ. ಮನಸ್ಸು ಒಂದು ನಿಮಿಷಾರ್ಧ ಕಹಿಯಾಗುತ್ತದೆ" ಎಂದು ಮುಗಿಸಿದ.

ತಥಾಗತನು ನರಗುರಿಯನ್ನು ಸಂತೈಸಿ, "ಹಾಗೆ ಮನಸ್ಸನ್ನು ನಿಷ್ಕಾರಣವಾಗಿ ಕಹಿಮಾಡಿಕೊಂಡು ನಿನ್ನಂಥವರು ಇಂಥ ಪದ್ಯಗಳನ್ನು ಬರೆದುಬಿಡಬಾರದು. ಅದನ್ನು ಹೀಗೆ ತಿದ್ದು.

ಇನ್ನಾದರೂ ನೀನು ಸುಖವಾಗಿ ಬಾಳು
ನಿನ್ನಿಂದ ಬರದಿರಲಿ ಯಾರಿಗೂ ಗೋಳು
ಇನ್ನಾದರೂ ನೀನು ಬಿಟ್ಟುಬಿಡು ಸೋಗು
ನೀನಿನ್ನು ಸಹಜತೆಯ ನಳವಹಿಸು ಹೋಗು.

"ತಥಾಸ್ತು" ಎಂದ ನರಗುರಿ.

ಪುಡಿ ಚಿಲ್ರೆ "ಎಂಥೆಂಥ ಮಹನೀಯರಿರುವರೋ ಏನೋ!" ಎಂದ.

—ಅ. ರಾ. ಸೇ.

ಬಾಗಿಲು

ಬೆಳಿಗ್ಗೆ ಎದ್ದು ಮುಖ ತೊಳೆದುಕೊಳ್ಳೋವಾಗ, ಜ್ಞಾಪಕಕ್ಕೆ ಬಂತು. ಹಿಂದಿನ ರಾತ್ರಿ ಉಂಡು ಮಲಗಿದಾಗ ನಿದ್ರೆಯ ಝೋಂಪು ಹತ್ತುತ್ತಿದ್ದಾಗ "ನನ್ನ ತಮ್ಮ ಬರ್ತಾನಂತೆ ಅಂದ್ರೆ." ಹೊಸ ಮನೆ ನೋಡಿಕೊಂಡು ಹೋಗ್ತಾನಂತೆ ಅಂದ್ರೆ" ಅಂತ ಶಾರದ ಹೇಳಿದ್ದು ಜ್ಞಾಪಕಕ್ಕೆ ಬಂತು ಚಾಟಿ ಏಟು ಹೊಡೆತ ತಿಂದಂತೆ ಮನಸ್ಸು ಎಚ್ಚರಗೊಂಡಿತು. ಈ ನೆನಪಾದಾಗ.

ನನ್ನ ಭಾವಮೈದ ಮನೆಗೆ ಬಂದರೆ, ಕೈ ಬೀಸಿಕೊಂಡೇ ಬರ್ತಾನೆ. "ಭಾವಯ್ಯಾ!" ಅಂತ ಶುರು ಮಾಡ್ತಾನೆ. ನಿಮ್ಮ ಎತ್ತರಾನೆ, ನಂದು. ನಿಮ್ಮ ದಪ್ಪಾನೆ ನಾನು, ಅಂಗಾಲು ಅಳತೆ ಕೂಡ ನಿಮ್ಮ ಹಾಗೇ ಅಂತ ಅಂತಾನೆ. ಅವನಿರೋ ಅಷ್ಟು ದಿನವೂ ನನ್ನ ಬಟ್ಟೆ ಬರೆ, ಕಾಲ್ಚೀಲ, ಬೂಡ್ಸು, ಚಪ್ಪಲಿ ಚಾರದ ಸಾಮಾನು ಇವುಗಳನ್ನು ಸುರಕ್ಷಿತವಾಗಿಡೋದೇ ಒಂದು ತಪಸ್ಸಾಗುತ್ತೆ. ಬೀಗ ಹಾಕಿಟ್ಟರೂ ಅಕ್ಕನ್ನ ಶಾಮೀಲು ಮಾಡಿಕೊಂಡು ಬಟ್ಟೆಬರೇನ ದರೋಡೆ ಮಾಡ್ತಾನೆ. ಇನ್ನೊಬ್ಬರು ಹಾಕ್ಕೊಂಡಿದ್ದನ್ನ ನಾನು ಹಾಕಿಕೊಳ್ಳಬೇಕಾದರೆ ಏಕೋ ಅಸಂಯ್ಯ, ಎಂತದೋ ವಾಮಾನಿಕೆ. ಆದ್ದರಿಂದ ಅವನು ಬರ್‍ತಾನೆ ಅಂದರೆ ಈಚೀಚೆಗೆ ಬಲು ಹುಷಾರಿ ನಾನು. ಟ್ರಂಕಿನಲ್ಲಿ ಎಲ್ಲವನ್ನು ಇಟ್ಟು ಬೀಗ ಹಾಕಿ, ಬೀಗದ ಕೈಯನ್ನು ಕಚೇರೀಲಿ ಭದ್ರವಾಗಿ ಇಟ್ಟುಬಿಡ್ತೀನಿ.

ಮುಖ ತೊಳೆದುಕೊಳ್ಳುವಾಗ ಯಾವ ಯಾವ ಸಾಮಾನುಗಳನ್ನ ಯಾವ ಯಾವ ಬಟ್ಟೆ ಬರೆಗಳನ್ನ ಟ್ರಂಕಿನಲ್ಲಿಟ್ಟು ಜೋಪಾನ ಮಾಡಬೇಕು ಅನ್ನೋದನ್ನ, ಕಾಫಿ ಕುಡಿದಮೇಲೆ ಕೊಠಡಿಗೆ ಹೋಗಿ ಕುಳಿತು, ಆಲೋಚನೆ ಮಾಡಿ ಪಟ್ಟಿ ತಯಾರಿಸೋದು. ನಂತರ ಅವನು ಬರೋ ಹಿಂದಿನ ದಿವಸ ಎಲ್ಲವನ್ನೂ ಭದ್ರ ಮಾಡೋದು ಅಂತ ಅಂದಾಜು ಹಾಕಿದೆ.

ಮುಖ ತೊಳೆದುಕೊಂಡು, ಊಟದ ಕೊಠಡೀಲಿ ಕಾಫಿ ಕುಡಿದು ನನ್ನ ಕೊಠಡೀಗೆ ಬಂದೆ ಕಾಗದ ಪೆನ್ಸಿಲ್ಲು ತೆಗೆದುಕೊಂಡು, ಪಟ್ಟಿ ಬರೆಯುಕ್ಕೆ ಶುರು ಮಾಡಿದೆ. ಯಾವ ಯಾವ ಅಂಗಿಗಳನ್ನ ಷರಟುಗಳನ್ನ ಜತನ ಮಾಡೋದು ಅಂತ ನಿರ್ಧಾರ ಮಾಡಿ ಬರೆದೆ. ಪಂಚೆಗಳಲ್ಲಿ ಯಾವುಯಾವುದನ್ನು ಮುಚ್ಚಿಡಬೇಕು ಅದನ್ನೂ ಬರೆದೆ. ಫೌಂಟನ್‌ಪೆನ್ನು ಪೆನ್ಸಿಲ್ಲು ರಬ್ಬರು ಎಲ್ಲವನ್ನೂ ಲೆಕ್ಕ ಹಾಕಿ ಗುರ್ತು ಮಾಡಿದೆ. ಯಾವ ಕ್ಷೌರದ ಕತ್ತಿ, ಬ್ಲೇಡುಗಳನ್ನು ಮರೆಮಾಚಿಡಬೇಕು ಎಂದು ಯೋಚಿಸಿ ತೀರ್ಮಾನಕ್ಕೆ ಬಂದೆ.

ಧಡಾರಂತ ಬಾಗಿಲು ತೆಗೆಯಿತು. ತಟ್ಟೆ ಬಟ್ಟಲು ತೆಗೆದುಕೊಂಡು ಶಾರದ ಪ್ರತ್ಯಕ್ಷಳಾದಳು. ಇದೇನಿದು ಈಗತಾನೇ ಕಾಫಿ ಕುಡಿದುಕೊಂಡು ಬಂದೆ.

ತಿರುಗಿ ಕಾಫಿಮಾಡಿಕೊಂಡು ತಂದಳಲ್ಲಾ ಏನಿದು? ಇಷ್ಟು ಪ್ರೀತೀನೆ ಇವಳಿಗೆ ನನ್ನ ಮೇಲೆ ಅಂತ ಒಂದು ಅರೆಕ್ಷಣ ಮನಸ್ಸೆಲ್ಲಾ ಬೆಳದಿಂಗಳಿನಿಂದ ತುಂಬಿ ದಂತಾಯ್ತು. ಹಾಗೇ ನೋಡಿದೆ. ತಟ್ಟೆಮೇಲೆ ಇದ್ದದ್ದು ಬೆಳಗ್ಗೆ ನಾನು ಕುಡಿದ ಕಾಫಿ ಬಟ್ಟಲೇ. ಎಂಜಲು ಬಟ್ಟಲು

ಹಿ ಹಿ ಹಿ ಹೀ ಅಂತ ಕಿಲ ಕಿಲ ನಕ್ಕಳು. ನಗ್ತಾ ತಟ್ಟೇನ ಕಿಟಕಿಯ ಬಡುವಿನಲ್ಲಿಟ್ಟು, ಕುರ್ಚಿಯ ಮೇಲೆ ಕಾಲು ಚಾಚಿಕೊಂಡು ಉಯ್ಯಾಲೆ ಮೇಲೆ ಮೋಹಿನಿ ಕೂತ ಹಾಗೆ ಕೂತುಕೊಂಡಳು. ನಗ್ತಾ ನನ್ನ ಮುಖದ ಮೇಲೆ ಇದ್ದ ಸಂಶಯದ ಛಾಯೆ ನೋಡಿ "ಎಲ್ಲಾ ಈ ಬಾಗಿಲಿನ ಅವಾಂತರ ಅಂದ್ರೆ. ನಮ್ಮ ಹಳೇ ಬಾಡಿಗೆ ಮನೇಲಿ ಊಟದ ಮನೆಯಿಂದ ಎಡಗಡೆ ಬಾಗಿಲು ತೆರೆದರೆ, ಬಚ್ಚಲ ಮನೆ ಸಿಕ್ತಾ ಇತ್ತು. ಈ ಹೊಸ ಬಾಡಿಗೆ ಮನೇಲಿ ಆ ಬಾಗಿಲು ತೆರೆದರೆ ನಿಮ್ಮ ಕೊಠಡಿ ಸಿಗುತ್ತೆ. ಹಳೇ ಅಭ್ಯಾಸ ಇನ್ನೂ ಕಾಡ್ತಾನೆ ಇದೆ. ಆ ಅರ್ಜುನನಿಗೆ ಆಯ್ತಲ್ಲ ಹಾಗಾಯ್ತು" ಎಂದಳು. ಕಿರುಬೆವರು ಮುತ್ತಿನಂತೆ ಮೋಹಿನಿಯ ಹಣೆಯ ಮೇಲೆ ಮಣಿ ಕಟ್ಟಿತ್ತು. ಅವಳ ಮೇಲೆ ಹೇಗೆ ತಾನೆ ರೇಗುಕ್ಕೆ ಸಾಧ್ಯ. ಬಲು ಮುಖ್ಯವಾದ ಕೆಲಸಮಾಡ್ತಾ ಇರೋವಾಗ ಬಂದು ಅಡ್ಡಿಯಾದಳಲ್ಲ ಅಂತ ಮನಸ್ಸು ಸ್ವಲ್ಪ ಹಾಗೆ ಹಾಗೇ ಆಗಿತ್ತು. ಅದಕ್ಕೇ ಕೇಳಿದೆ. "ಯಾವ ಅರ್ಜುನನೇ, ಅವನಿಗೇನಾಯ್ತೆ?" ಎಂದು.

"ಜ್ಞಾಪಕ ಇಲ್ಲವೇ ಅಂದ್ರೆ! ಅಪ್ಪಾಭಟ್ಟರ ಮಗನಾಗಿ ತಿಪ್ಪಾಭಟ್ಟರ ಅಳಿಯನಾಗಿ, ಅರ್ಜುನಂಗೆ ಆಗಿದ್ದು ಗೊತ್ತಿಲ್ವೇ ಅಂದ್ರೆ!" ಅಂತ ರಾಗ ತೆಗೆದು ನಕ್ಕಳು.

"ಅಲ್ಲಾ ಕಣೆ ಶಾರದ, ಬಾಡಿಗೆ ಮನೆಗಳನ್ನು ಬದಲಾಯಿಸಿ, ಬಾಗಿಲುಗಳನ್ನು ತಪ್ಪು ತಪ್ಪು ತೆಗೆದು, ನೀನು ಎಂಜಲು ಮುಸಿರೆ ಪಾತ್ರೆಗಳ ಜತೆ ನನ್ನ ಕೊಠಡಿಗೆ ಬಂದೆ. ಹಾಗೆ ಅರ್ಜುನ ಎಲ್ಲಿ ಮಾಡಿದನೇ, ಯಾವ ಮಹಾ ಭಾರತದಲ್ಲಿ ಹೇಳಿದೆಯೇ? ಇದನ್ನೆಲ್ಲಿ ಕೇಳಿದೆಯೇ?" ಎಂದು ವ್ಯಂಗ್ಯವಾಗಿ ಹೇಳುತ್ತಾ ಅವಳ ಮೊಣಕಾಲಿನ ಮೇಲೆನ ಸೀರೆ ನೆರಿಯನ್ನೇ ನೋಡುತ್ತಿದ್ದೆ.

" ಇಷ್ಟೇನೇ ನಿಮ್ಮ ತಿಳಿವಳಿಕೆ! ಚೆನ್ನಾಯ್ತು! ಮರೆತು ಹೋಯಿತೆ ಅಂದ್ರೆ!.

ಒಂದೊಂದು ವರ್ಷ ಒಬ್ಬೊಬ್ಬ ಗಂಡನ ಜತೆಗೆ ಸಂಸಾರ ಮಾಡಿಕೊಂಡಿರೋದು ಅಂತ ದ್ರೌಪದಿ ನಿಯಮ ಮಾಡಿಕೊಂಡಿದ್ದಳು. ಪಂಚಪಾಂಡವರಿಗೂ ಒಂದೇ ತರಹ ಮನೆಗಳನ್ನು, ಬೊಂಬಾಯಿನಲ್ಲಿ ಫ್ಲಾಟ್ ಇರೋ ತರಹ ಕಟ್ಟಿಸಿದ್ದರು. ಒಂದು ಸಂಜೆ ವಾಕಿಂಗ್ ಹೋಗಿದ್ದ ಅರ್ಜುನ, ಕೇದಗೆ ವನದ ಸುತ್ತ ಓಡಾಡಿ ಬಂದಿದ್ದ, ಆ ಘಮ ಘಮ ಅವನನ್ನು ಆವರಿಸಿತ್ತು. ನಾಗನಾಗಿನಿಯರ ಆಟ ಬೇರೆ ನೋಡಿದ್ದ. ಆ ಮೋಜಿನಲ್ಲೇ ಹಿಂತಿರುದಾಗ, ದಾರಿ ತಪ್ಪಿ ಬಳೆ ಶಬ್ದ ಕೇಳಿಸಿ ಬಂದ ಮನೆಗೆ ನುಗ್ಗಿದ. ಅಲ್ಲಿ ದ್ರೌಪದಿ ಇನ್ನೊಬ್ಬ ಸೋದರನ ಜತೆ, ಸರದಿಯಂತೆ ಲಲ್ಲೆ ಆಡ್ತಾ ಇದ್ದಳು. ತಕ್ಷಣ ಹಿಂದಕ್ಕೆ ಕಾಲಿಟ್ಟು ಹೊರಗೆ ಬಂದ.

ಆಮೇಲೆ ಗೊತ್ತಿದೆಯಲ್ಲಾ. ಪ್ರಾಯಶ್ಚಿತ್ತ, ಭೂಪ್ರದಕ್ಷಿಣೆಗೆ ಹೊರಟ. ನಂಗೂ ಹಾಗೇ ಆಯ್ತು. ನಿಮ್ಮ ಕೊಠಡಿಯಿಂದ ಈಗ ಎಲ್ಲಂಬಳಸೆ ಹೋಗಿ ಬಚ್ಚಲಮನೆ ಸೇರಬೇಕು" ಎಂದು ತಿರುಗಿ ಕಿಲಕಿಲನಕ್ಕು, ಸೆರಗಿನ ತುದಿಯಿಂದ ಹಣೇನ ಒರೆಸಿಕೊಂಡಳು.

ಸೆರಗಿನ ಅಂಚಿನ ಚಲನವಲನಗಳನ್ನೇ ಕಣ್ಣುಗಳಿಂದ ಹಿಂಬಾಲಿಸಿದೆ. ಆದರೂ ಮನಸ್ಸನ್ನು ನಿಲ್ಲಿಸಿ ಹೇಳಿದೆ.

"ಹೆಂಗಸರು ಅಂದರೆ ಯಾವಾಗಲೂ ಎಳ್ಳಂಬಳಸೆ ಮಾಡೋರೇ! ನೇರವಾಗಿ ಹ್ಞೂ, ಉಹ್ಞೂ ಅಂತ ಅವರಪ್ಪನ ಆಣೆಗೂ ಅನ್ನೋದೇ ಇಲ್ಲ. ಉಹ್ಞೂ ಅಂದಾಗ ಹ್ಞೂ ಅಂತ ಮನಸ್ಸಿನಲ್ಲಿ. ಹ್ಞೂ ಅಂತ ಅಂತಲೂ ಎಂದೂ ಅನ್ನೋದೇ ಇಲ್ಲವಲ್ಲ! ಅಂತ ಪೀಠಿಕೆ ಶುರುಮಾಡಿದೆ.

"ಗೊತ್ತು ಅಂದ್ರೆ ನಿಮ್ಮ ಜಾಣತನ! ಅರ್ಜುನ ಭೂಪ್ರದಕ್ಷಿಣೆಗೆ ಹೋಗಿದ್ದೂ ಗೊತ್ತಿಲ್ಲ. ಹೆಂಗಸು ಅಂತ ನನ್ನ ಆಡುಕ್ಕೆ ಶುರುಮಾಡ್ತೀರಿ. ದ್ರೌಪದಿ ಹೆಂಗಸೇ. ನೋಡಿ ಐದು ಜನ ಗಂಡಂದಿರನ್ನ ಹೇಗೆ ನಿಭಾಯಿಸ್ತಾ ಇದ್ದಳು. ಅದೂ ಎಂಥೆಂಥ ಗಂಡಸರು!" ಎಂದು ಲೊಚಗುಟ್ಟುತ್ತಾ ಎದ್ದು ಕಿಟಕಿ ಬಡುವಿನಿಂದ ತಟ್ಟೆ ಬಟ್ಟಲು ತೆಗೆದುಕೊಂಡು ಊಟದ ಮನೆ ಕಡೆಗೆ ಹೊರಟುಹೋದಳು.

ಹೊರಟು ಹೋದಾಗ ಅವಳ ಕಾಲುಂಗ್ರದ ಟಕಟಕ ಕೇಳಿಸ್ತಾ ಇತ್ತು. ಆ ಶಬ್ದದ ಜತೆಗೆ ಅವಳ ತಮ್ಮ ಬರ್ತಾನೆ ಅನ್ನೋ ನೆನಪು ತಾಳ ಹಾಕ್ಕೊಂಡು ಮನ ಮುಂದೆ ಪ್ರತ್ಯಕ್ಷವಾಯಿತು.

ಪಟ್ಟಿಯನ್ನ ಮುಗಿಸುವುದಕ್ಕೆ ತೊಡಗಿದೆ. ಟೈ ಕಾಲರ್‌ಗಳಿಂದ ನೆಟ್‌ಬನೀನ್ ಮುಂತಾದ ಆಧಾರ ಉಡುಪುಗಳ ತನಕ ಎಲ್ಲವನ್ನೂ ಸುರಕ್ಷಿತವಾಗಿ ಇಡುವ ಯೋಜನೆ ಮಾಡಿದೆ. ಅಗಸರ ಅಂಗಡೀಗೆ ಕಾಗದ ಬರೆದು, ಇನ್ನೊಂದು ಹದಿನೈದು ದಿವಸ ದಯವಿಟ್ಟು ಮಡಿ ಬಟ್ಟೇನ ಮನೆಗೆ ಹಿಂತಿರುಗಿ ತಂದುಕೊಡಬೇಡಿ ಎಂದು ಕಾಗದ ಬರೆದೆ. ಅದನ್ನ ಲಕ್ಕೋಟಿಗೆ ಹಾಕಿ ಅಂಟಿಸಿ, ಮನೆ ಹೊರಗಿದ್ದ ಅಂಚೆ ಪೆಟ್ಟಿಗೇಲಿ ಹಾಕಿ ಬರೋಣ, ಕಾದರೆ ಮರೆತುಹೋದೀತು ಅಂತ, ಆಗಲೇ ಎದ್ದು, ಹೊರಗೆ ಹೋಗೋಣ ಅಂತ ಬಾಗಿಲು ತೆಗೆದೆ.

ಉಗ್ರಾಣ ಸಿಕ್ಕಿತು.

"ಶಾರದ ಏನಂದಳು? ಆ ಅರ್ಜುನನ ಹಾಗೆ...... ಅಂತ ಏನೇನೋ ಅಂದಿದ್ದಳು.

—ಕುಮಾರ್

ಪ್ರಜಾಪ್ರಭುತ್ವದ ನಾಂದಿ

ಸನ್ ಸಾವಿರದ ಒಂಬೈನೂರ ಅರವತ್ತು ಆಗಸ್ಟ್‌ನಲ್ಲಿಯೇ ಖಂಡೇರಾಯರು ನಾಗರಹಾವಾದರು. ಮತ್ಸರದ ವಿಷ ಅವರ ಹಲ್ಲುಗಳಿಗೆ ಮೆತ್ತಿಕೊಂಡಿತು ಪ್ರೆಸಿಡೆಂಟು ಶರಭಣ್ಣನನ್ನು ಕಡಿಯಲು ಹವಣಿಸುತ್ತಿದ್ದರು. "ಪುಡಾರಿ ಶರಭಣ್ಣನಿಗೆ ಪ್ರೆಸಿಡೆಂಟಿರಲಿ, ಡವಾಲಿಯಾಗುವ ಯೋಗ್ಯತೆಯೂ ಇಲ್ಲ" ಎಂದೇ ಖಂಡೇರಾಯರ ವಾದ. ಶರಭಣ್ಣ ಮೂರು ಘಂಟೆಗಳ ಕಾಲ ನಿರರ್ಗಳವಾಗಿ ಭಾಷಣ ಬಿಗಿಯಲಾರ. ಇದು ಮೊದಲನೇ ಡಿಫೆಕ್ಟು. ಉಗ್ಗಿನ ಜೊತೆ ಕಲಸಿದ ಗ್ರಾಮ್ಯ ಭಾಷೆ ಸಭಾಕಂಪ ದೊಂದಿಗೆ ಮಿಲನವಾಗಿ, ಅವನು ಹಾಡುವ ಭಾಷಣಕ್ಕೆ ಕಿವಿಗಳೇ ಒದಗುತ್ತಿರಲಿಲ್ಲ. ಮೂರನೆಯದಾಗಿ ಅವನು C.I.D.ಗಳನ್ನು ನೇಮಿಸಿಕೊಂಡು, ಇತರೇ ಮೆಂಬರುಗಳ ಗುಟ್ಟನ್ನು ಬಯಲುಮಾಡಿ, ಅಸೆಂಬ್ಲಿಯಲ್ಲಿ ಮಾನ ಕಳೆಯುತ್ತಿದ್ದ. ಖಂಡೇರಾಯರಿಗೆ ಈ ಮೂರನೇ ಡಿಫೆಕ್ಟನ್ನು ಕಂಡರೆ ಸಹ್ಯವಾಗುತ್ತಿರಲಿಲ್ಲ.

ಖಂಡೇರಾಯರು ಇಂಟರ್‌ವರೆಗೂ ದಂಡೆಯಾತ್ರೆ ಮಾಡಿದವರು. ಕೊನೆಗೆ ಅದು ಸಾಧಿಸದೆ, ಚಳುವಳಿ, ಸತ್ಯಾಗ್ರಹಗಳಲ್ಲಿ ಬಿದ್ದು, ಬೂಡ್ಸಿನೇಟುಗಳನ್ನು ತಿಂದು, ಜೈಲು ಸೇರಿದವರು. ಅವರು ತಮ್ಮ ಸರ್ವಿಸನ್ನೆಲ್ಲಾ ಮಾತಿನಲ್ಲೇ ಕಳೆದವರು. ವಾಚಾಳಿ ಮತ್ತು ವ್ಯವಹಾರಿ. ಅವರ ಪರಂಪರೆಯೇ ಜೈಲಿಗೆ ಹೋಗಿ ಬಂದವರದು. ಆದರೆ ಖಂಡೇರಾಯರ ಹಲ್ಲುಗಳಿಗೆ ವಿಷ ಮೆತ್ತಿಕೊಂಡುದು ಅರವತ್ತರ ಆಗಸ್ಟಿನಿಂದೀಚೆಗೆ. ಇದಕ್ಕೆ ಬಲೇ ದೊಡ್ಡ ಕಾರಣವೂ ಉಂಟು ಅನ್ನಿ.

ಸರಕಾರದವರು ಅಕ್ಕಿ ಬೆಲೆ ಒಂದೇ ಏಟಿಗೆ ಏರಿಸಿದಾಗ, ಬಡ ಬೋರೇಗೌಡರುಗಳು ಅಕ್ಕಿಗಾಗಿ ಪರದಾಡಿದರು. ಮಧ್ಯಮ ತರಗತಿಯವರು, ಪೆನ್‌ಷನ್‌ದಾರರೂ ದುಡ್ಡಿಗಾಗಿ ಲಬೋಲಬೋ ಮಾಡಿದರು. ಈ ಪರಿಸ್ಥಿತಿಯಲ್ಲೇ ಖಂಡೇರಾಯರು ಮುಳ್ಳೂರಿನ ಪುರಸಭೆಯ ಅಂಗಳದಲ್ಲಿ ಗುಡಾರವನ್ನು ಹಾಕಿಕೊಂಡು ಉಪವಾಸ ಸತ್ಯಾಗ್ರಹ ಪ್ರಾರಂಭಿಸಿದರು. "ಅಕ್ಕಿ ಬೆಲೆ ಇಳಿಸಿ, ನಾನು ಉಪವಾಸ ಮುಷ್ಕರವನ್ನು ನಿಲ್ಲಿಸುತ್ತೇನೆ" ಅಂತ ಸವಾಲು ಹಾಕಿದರು. ಆದರೆ ಖಂಡೇರಾಯರು, ಉಪವಾಸ ಬೆದರಿಕೆ ಹಾಕಿದರೂ ಮುಳ್ಳೂರಿನ ಸರಕಾರ ಅದನ್ನು ಗಮನಿಸಲಿಲ್ಲ. ಖಂಡೇರಾಯರು ಇಪ್ಪತ್ತು ದಿನಗಳಷ್ಟು ಉಪವಾಸ ಮಾಡಿದರೂ

ಒಂದು ಸ್ವಲ್ಪವೂ ಸೊರಗಿರಲಿಲ್ಲ. ಇದರಿಂದ ಶರಭಣ್ಣನಿಗೆ ಗುಮಾನಿಯಾಯಿತು. ಅವನ C. I. D. ಗಳು ತನಿಖೆ ನಡೆಸಿದಾಗ ತಿಳಿದ ವಿಷಯವೇನೆಂದರೆ, ಖಂಡೇರಾಯರು ತಮ್ಮ ಪಟ್ಟಾಗಳ ಕೈಲಿ ಬೆಣ್ಣೆ ಮಸಾಲೆಯನ್ನು ತರಿಸಿಕೊಂಡು, ರಾತ್ರಿಯ ವೇಳೆಯಲ್ಲಿ ಗುಡಾರದಲ್ಲಿ ಕುಳಿತು ಮೆಲ್ಲುತ್ತಿದ್ದರಂತೆ. ಪುಢಾರಿ ಶರಭಣ್ಣ ಒಂದು ದಿನ ರಾತ್ರಿ ಬೆಣ್ಣೆ ಮಸಾಲೆಯನ್ನು ತನ್ನ C. I. D. ಗಳ ಮೂಲಕ ಗುಡಾರಕ್ಕೆ ಕಳಿಸಿದ. ಖಂಡೇರಾಯರ ಶಿಷ್ಯರು ಮಸಾಲೆ ತರುವುದಕ್ಕೆ ಹೊರಗೆ ಹೊರಟಿದ್ದ ವೇಳೆಯನ್ನು ನೋಡಿ, ಶರಭಣ್ಣನ C. I. D. ಗಳು ಬೆಣ್ಣೆ ಮಸಾಲೆಯನ್ನು ಖಂಡೇರಾಯರ ಮುಂದೆ ಹಿಡಿದರು ಕತ್ತಲು ಗುಡಾರದಲ್ಲಿ ಖಂಡೇರಾಯರಿಗೆ ನಾಸಿಕಕ್ಕೇರಿದ ಮಸಾಲೆಯ ವಾಸನೆಯೊಂದೇ, ಬೆಳಗಿಂದ ಉದರಕ್ಕಿಲ್ಲದೆ ಬಳಲಿದ್ದ ಅವರು ಪೊಟ್ಟಣವನ್ನು ಗಬಕ್ಕನೆ ಕಿತ್ತುಕೊಂಡು, ಗಬಗಬನೆ ತಿಂದರು. ಆ ದೃಶ್ಯವನ್ನು C. I. D. ಗಳು ಕ್ಯಾಮರಾದಲ್ಲಿ ಹಿಡಿದು ಶರಭಣ್ಣನ ಕೈಗೆ ಹಾಕಿದಾಗ, ಅವ ಅಸೆಂಬ್ಲಿಯಲ್ಲಿ ದೊಡ್ಡ ಕೋಲಾಹಲವನ್ನೇ ಎಬ್ಬಿಸಿದ. ಖಂಡೇರಾಯರು ಆಗ ತಲೆ ತಗ್ಗಿಸಿದರು. ಆಗ ತಗ್ಗಿದ ಖಂಡೇರಾಯರ ಗೋಣು ಸನ್ ಸಾವಿರದ ಒಂಬೈನೂರು ಅರವತ್ತಮೂರರ ಫೆಬ್ರವರಿ ಮಾಹೆಯೇ ಸೆಟೆದು ಕುಳಿತುಕೊಂಡಿದ್ದು. ಖಂಡೇರಾಯರು ಮೊದಲುಬಾರಿಗೆ ಶರಭಣ್ಣನನ್ನು ಕಡಿದಿದ್ದು.

ಕರಪ್ಷನ್ನು, ಸುಳ್ಳು, ತಟವಟ, ತಕಾವಿ ಸಾಲಗಳ ಸ್ವಾಹಾ ಇದೆಲ್ಲವನ್ನೂ ಅವರು ಶರಭಣ್ಣನವರಮೇಲೆ ಆರೋಪಿಸಿದರು. ಆದರೆ ಮೊನ್ನೆ ಮೊನ್ನೆ ಸಿಟಿಂಗ್‌ನಲ್ಲಿ ಅವರು ಕೇಳಿದ ವೈಖರಿಯೇ ಭರ್ಜರಿಯಾಗಿತ್ತು.

" ಕಾಂಗ್ರೆಸ್ ಭಕ್ತರು ಕುಡಿಯಬಹುದೇ ? " ಖಂಡೇರಾಯರ ಪ್ರಶ್ನೆ.

" ಕೂಡದು. ಅದು ತಪ್ಪು. ಅದು ದ್ರೋಹ. ಗಾಂಧಿ ಮಹಾತ್ಮನಿಗೆ ಕೆಡಕು ಮಾಡಿದಾಗೆ...." ಅದು ಶರಭಣ್ಣನ ಉತ್ತರ.

"ಹಾಗಾದರೆ ಮಾನ್ಯ ಕಾಂಗ್ರೆಸ್ ಭಕ್ತ ಶರಭಣ್ಣನವರೇ ತಾ|| 7-7-62 ರಲ್ಲಿ ತುಮ್ಮನಹಳ್ಳಿ ಟಿ. ಬಿ. ಯಲ್ಲಿ, ತಾವು ಕಂತ್ರಿ ಹಾಗೂ ಸ್ಕಾಚ್‌ವಿಸ್ಕಿ ಕುಡಿದಿದ್ದೇಕೆ?"

ಶರಭಣ್ಣನ ನಾಲಿಗೆ ತೊದಲಿತು ಅವನ ಮಿದುಳು ಎಡವಿತು. ಶರಭಣ್ಣ " ನೋಟೀಸ್ " ಅಂತ ಹೇಳಿ ಬಚಾವಾಗಿದ್ದ.

ಇನ್ನೊಂದು ಸಿಟಿಂಗ್‌ನಲ್ಲಿ ಖಂಡೇರಾಯರು ವೈಖರಿ ಪೂರ್ಣವಾಗಿ ಕೇಳಿದರು. " ಮಡಿವಂತ ಕಾಂಗ್ರೆಸ್ಸಿಗರು ಅತ್ಯಾಚಾರ ಮಾಡಬಹುದೇ ? "

" ಕೂ ...ಕೂಡದು. ಅದು ದೇಶಕ್ಕೆ ಕೆಟ್ಟದಾಯ್ತದೆ...." ಶರಭಣ್ಣ ತೊದಲಿದ ಹಾಗಾದರೆ ಮಡಿವಂತ ಶರಭಣ್ಣನವರು ತಾ|| 9-10-62ರಲ್ಲಿ ತೋಪನೂರಿನ

ಸ್ಕೂಲಿನ ಮೇಡಂ ಮೇಲೆ ಅತ್ಯಾಚಾರ ನಡೆಸಿ, ಆಕೆಯ ಬಾಯನ್ನು ಮುಚ್ಚಿಸಲು, ಅವಳನ್ನು ಹೆಡ್‌ಮೇಡಂ ಆಗಿ ಗುಡಿಬಂಡೆಗೆ ವರ್ಗಾಯಿಸಿದ್ದು ನ್ಯಾಯವೇ ?"

ಶರಭಣ್ಣನ ಕತ್ತು ಉಳುಕಿ ಕೆಳಗಿಳಿಯಿತು ಬಿಳಿ ತೋಪಿ ಗಡಗಡನೆ ನಡುಗಿತು. ಮೈ ಪೂರ ಬೆವರಿನ ಸ್ನಾನವಾಯಿತು.

"ನೋ... ನೋಟೀ....ಸ್" ಅಂತ ಒದರಿ ಶರಭಣ್ಣ ಕಾಲಿಗೆ ಬುದ್ಧಿ ಹೇಳಿದ.

"ಖಂಡೇರಾಯನಿಗೆ ಸುದ್ದಿ ಕೊಡುತ್ತಿರುವ ಈ ಪೀತ ಮನುಷ್ಯನಾರು" ಅಂತಂಬೂದನ್ನ ಶರಭಣ್ಣನ C. I. D. ಗಳು ತನಿಖೆ ಮಾಡಿದರೂ ಏನೂ ಪ್ರಯೋಜನವಾಗಲಿಲ್ಲ.

ಪತ್ರಿಕೋದ್ಯಮಿಯಾದ ನನಗೂ ಇದರ ಅರ್ಥವಾಗಿರಲಿಲ್ಲ. ಶರಭ ಭಲೇ ಗುಟ್ಟಿನ ಮನುಷ್ಯ. ಆ ಖಧೀಮನ ಒಡಕು ತಡಕುಗಳು ಖಂಡೇರಾಯನಿಗೆ ತಿಳಿದ ಬಗೆ ಹೇಗೆ ಅಂಬೋದು ತಿಳಿಯದೆ ಒಂದು ಬಾರಿ ಖಂಡೇರಾಯರ ಮರ್ಜಿ ಹಿಡಿದು ಅವರು ಎರಡು ಡ್ರಾಂ ಕಂಟ್ರಿ ಹಾಕಿದ್ದಾಗ ಕೇಳಿದೆ.

"ಏನು ಖಂಡೇರಾವ್ ಶರಭಣ್ಣನ ಹುಳುಕೆಲ್ಲಾ ಹೇಗೆ ಪತ್ತೆ ಹಚ್ಚಿದಿರಿ?" ಅಂತ" ಅದೇನು ಕಷ್ಟಾನ್ರಿ, ಅವ ಹೋಗ್ತಾನಲ್ಲಾ ಆ ಕಿರಿಸ್ತಾನಿ ಹುಡುಗಿ ಡಿಸೌಜಮ್ಮ ಅವಳನ್ನು ಒಳಗೆ ಹಾಕ್ಕೊಂಡು, ಶರಭ ಅಲ್ಲಿ ಅವಳ ಹತ್ತಿರ ಬಂದಾಗ ಲೆಲ್ಲಾ, ನಾನು ಮಂಚದಡೀಲಿ ಅವಿಸಿಕೊಂಡಿದ್ದು, ಅವ ಆವಳ ಹತ್ತಿರ ಹರಟಿದ ನ್ನೆಲ್ಲಾ ಡೈರೀಲಿ ಗುರ್ತು ಹಾಕಿಕೊಂಡು, ಅಸೆಂಬ್ಲಿಯಲ್ಲಿ ಹೆದರಿಸುತ್ತಿದ್ದೆ. ಕ್ಯಾಕರಿಸಿ ಉಗೀತಿದ್ದೆ ಅವನ ಮುಖದ ಮ್ಯಾಲೆ...." ಅಂದರು ಖಂಡೇರಾವ್.

ಇತ್ತೀಚೆಗೆ ನಮ್ಮೂರು ಮುನಿಸಿಪಾಲಿಟಿ ಸಿಟಿಂಗುಗಳು ಬಲೇ ರಸವತ್ತಾಗಿ ರುತ್ತೆ. ಒಬ್ಬರ ಹುಳುಕನ್ನು ಮತ್ತೊಬ್ಬರು ಹಿಡಿದು ತೋರಿಸಿ, ಆದರ್ಶ ಪ್ರಜಾ ಪ್ರಭುತ್ವ ಸ್ಥಾಪನೆಗೆ ಮುಳ್ಳೂರಿನಲ್ಲಿ ನಾಂದಿ ಹಾಡಿದ್ದಾರೆ.

—ಕೆ. ಎನ್. ಕಿಟ್ಟನ್

ಹೆಸರಲ್ಲೇನಿದೆ?

ನನ್ನ ಮಡದಿ "ಕಾಂಚನ"
ಬಡತನದ ಲಾಂಛನ!
ಆದರೂ....
ಹೆಸರಲ್ಲಿದೆ ನನಗೆ ಸಲಿಗೆ
ಮುರಾರ್ಜಿಗಿಲ್ಲ ತೆರಿಗೆ!

—ಹಾ. ರಾ.

'ಸ್ವಲ್ಪ ಗುಮಾನೀನೇ!'

ಸ್ವಲ್ಪ ಗುಮಾನಿ ಬರೋಹಾಗಿದೆ, ನೀವು ಮಾಡಿರೋ ಕೆಲಸ ನೋಡಿದರೆ. ಅಂದ ಹಾಗೆ ಯೋಚನೆ ಮಾಡಿದರೆ, ತುಂಬಾ ಗುಮಾನಿ ಬರೋಹಾಗೇ ಇದೆ. ಪೀಕಲಾಟಕ್ಕೆ ಸಿಕ್ಕಿಹಾಕಿಕೊಂಡಿದ್ದೀರಿ" ಎಂದರು ಲಾಯರು ವೆಂಕೋಬರಾಯರು. ಬಹಳ ಅನುಭವಸ್ಥರು ವೆಂಕೋಬರಾಯರು. ಹಿರಿಯರು. ಕಾನೂನಿನ ವಿಚಾರ ವನ್ನೆಲ್ಲಾ ಚೆನ್ನಾಗಿ ತಿಳಿದುಕೊಂಡಿದ್ದವರು. ಜನರ ನಡವಳಿಕೆಯಿಂದಲೇ ಅವರ ಯೋಗ್ಯತೆಯನ್ನು ಖರಾರುವಾಕ್ಕಾಗಿ ಅಳೆಯುವ ಸಾಮರ್ಥ್ಯ ಹೊಂದಿದ್ದವರು. ಹೆಸರಾಂತ ವೆಂಕೋಬರಾಯರೇ ಕಕ್ಷಿಗಾರನಿಗೆ ಹೇಳಿದಾಗ, ಕಕ್ಷಿಗಾರ ಸಹಜವಾಗಿ "ಅಂಥಾದ್ದೇದು ಮಹಾಪರಾಧ ನಾನು ಮಾಡಿದ್ದು, ಸಾರ್।" ಅಂತ ಶುರು ಮಾಡಿಯೇ ಮಾಡ್ತಾನೆ, ಎಂಬುದೂ ಲಾಯರ್ ವೆಂಕೋಬರಾಯರು ಊಹಿ ಸಿದ್ದರು. ಅವರು ಎಣಿಸಿದಂತೆ ಕಕ್ಷಿಗಾರ ಕೇಳಿಯೇ ಕೇಳಿದ "ಅಂಥಾದ್ದೇನು ಮಹಾಪರಾಧ ನಾನು ಮಾಡಿದ್ದು, ಸಾರ್" ಅಂತ.

ತ್ಸ್ ತ್ಸ್ ತ್ಸ್ ಅಂತ ಲೊಚಗುಟ್ಟುತ್ತಾ ಕಕ್ಷಿಗಾರ ಮಾತು ಮುಂದುವರಿಸುವು ದನ್ನು ಲಾಯರು ವೆಂಕೋಬರಾಯರು ತಡೆದರು ತಾವೇ ಮಾತನ್ನು ಮುಂದು ವರಿಸಿದರು. "ನಿಮ್ಮ ಪರ ಲಾಯರಾದದ್ದು ತಪ್ಪೇನೋ ಎನಿಸುತ್ತಿದೆ. ಬೇಕಾ ದಷ್ಟು ಹಣವನ್ನು ಖರ್ಚುಮಾಡಲು ನೀವು ಶಕ್ತರಿದ್ದೀರಿ ಅಂತ ನಂಬಿಕೆ ಬಂದಿದೆ. ಆದರೂ ಗುಮಾನಿ ಬರುವ ಮೊಕದ್ದಮೆಗಳಲ್ಲಿ, ಅನ್ಯಾಯ, ಲೂಟಿ, ಕಳ್ಳತನ ಇತ್ಯಾದಿ ವ್ಯವಹಾರಗಳಲ್ಲಿ ನನ್ನ ಹೆಸರು ಕೂಡಿಕೊಳ್ಳುವುದು ಸರ್ವಥಾ ನನಗೆ ಇಷ್ಟವಿಲ್ಲ" ಎಂದರು.

"ಇದು ಏನುಮಾತಾಡ್ತೀರಿ, ಸಾರ್! ನೀವು. ಗುಮಾನಿ ಯಾಕೆ ಬರಬೇಕು ಸಾರ್! ಯಾವ ಸಭ್ಯಸ್ಥನಾದರೂ ನಾನು ಮಾಡಿದ್ದನ್ನೇ ಮಾಡ್ತಾ ಇರ್ತಿರ್ಲಿಲ್ವೇ? ಸಾರ್! ಕಷ್ಟದಲ್ಲಿರೋರ ಸಹಾಯಕ್ಕೆ ಹೋಗೋದೇ ತಪ್ಪೇ!" ಎಂದು ಆವೇಶ ದಿಂದ ನುಡಿದ ಕಕ್ಷಿಗಾರ.

ಲಾಯರು ವೆಂಕೋಬರಾಯರು ಮೂಗನ್ನು ಒರೆಸಿಕೊಂಡರು. ಏನೋ ಕೊಳೆತವಾಸನೆ ಬಂದೋರು ಮಾಡೋಹಾಗೆ. ಕರವಸ್ತ್ರದಿಂದ ಕಣ್ಣನ್ನು ಒರೆಸಿ

ಕೊಂಡರು. ಏನೋ ಕೆಟ್ಟಿದ್ದನ್ನು ಕಂಡೋರ ಹಾಗೆ. ಆಮೇಲೆ ವಿಲಂಬಿತ ಕಾಲದಲ್ಲಿ ಕ್ಷೇತ್ರಯ್ಯ ನುಡಿದಂತೆ ನುಡಿದರು.

"ಸಾವಧಾನವಾಗಿ ಕೇಳ್ರಿ. ಆವೇಶ, ಆತುರ, ಕಣ್ಣೀರು, ಕೋಪ ಇವು ಯಾವುದೂ ನ್ಯಾಯಾಸ್ಥಾನದಲ್ಲಿ ಬೇಳೆ ಬೇಯಿಸುವುದಿಲ್ಲ. ಆ ತರಹ ನಾಟಕೀಯ ನಡವಳಿಕೆಯನ್ನೆಲ್ಲಾ ಕಟ್ಟಿಟ್ಟುಬಿಡಿ. ಕರುಣೆಯಿಂದ ಹಾಗೆ ಮಾಡಿದೆ. ಮನುಷ್ಯ ಮನುಷ್ಯನಲ್ಲಿ ತೋರುವ ದಯೆಯಿಂದ ಹಾಗೆ ಮಾಡಿದೆ. ದಯೆಯೇ ಧರ್ಮದ ಮೂಲ, ಇಂತಹ ಸಬೂಬನ್ನೇ ನೀವು ಕೊಡೋದಾದರೆ, ಬೇರೆ ನಂಬಬಹುದಾದಂತಹ ಸಬೂಬು ಇಲ್ಲದೆ ಹೋದರೆ, ಮೊಕದ್ದಮೆಯನ್ನು ಬೆಳೆಸೋದೇ ಬೇಡ ಈಗಲೇ ನಾನು ತಪ್ಪಿತಸ್ಥ ಎಂದು ಒಪ್ಪಿಕೊಂಡುಬಿಡಿ" ಎಂದರು.

"ಯಾವ ತಪ್ಪುಮಾಡಿದೆ ಅಂತ ಒಪ್ಪಿಕೊಳ್ಳಲಿ ಸಾರ್! ನಾನು ಮಾಡಿದ ಅಪರಾಧ ಏನು, ಯಾತಕ್ಕಾಗಿ ಪೋಲೀಸಿನವರು ನನ್ನ ಮೇಲೆ ಮೊಕದ್ದಮೆ ಹೂಡಿದ್ದಾರೆ ಅನ್ನೋದೇ ಸರಿಯಾಗಿ ತಿಳೀಲಿಲ್ವಲ್ಲ ಸಾರ್" ಎಂದು ಕಕ್ಷಿಗಾರ, ತಲೆ ಕೊಡವಿಕೊಳ್ಳುತ್ತಾ ಕೇಳಿದ.

"ಸ್ಪಷ್ಟವಾಗೇ ಇದೆ ನೀವು ಮಾಡಿದ ಕೆಲಸ. ವಿವರಿಸಬೇಕಾದ ಆವಶ್ಯಕತೆ ಎಲ್ಲಿ ಬಂತು? ಯಾರದೋ ಪ್ರಾಣ ರಕ್ಷಣೆ ಮಾಡಿದೆ ಅಂತ ಹೇಳಿದಿರಲ್ಲ ಆ ವ್ಯಕ್ತಿಯೂ, ನೀವೂ ಶಾಮಿಲಾಗಿ ದರೋಡೆ ಗುಂಪಿನ ಪರ ಕೆಲಸಮಾಡ್ತಾ ಇದ್ದೀರಿ ಅಂತ ಪೋಲೀಸಿನವರ ನಂಬಿಕೆ. ನಾನೂ ಮೊದಲು ಮೊದಲು ಏನೂ ತಿಳಿದವರಲ್ಲ ನೀವು. ಅಜಾಗರೂಕತೆಯಿಂದ ಅಪರಾಧಿಗಳ ಸಂಗದಲ್ಲಿ ಸಿಕ್ಕಿಹಾಕಿಕೊಂಡಿರಿ ಎಂದಿದ್ದೆ. ಆದರೆ ಆ ವ್ಯಕ್ತಿಯ ವಿಚಾರಣೆ, ಚರಿತ್ರೆ ಎಲ್ಲವನ್ನೂ ಪೋಲೀಸಿನವರು ಅಜಮಾಯಿಷಿ ಮಾಡಿದಾಗ, ಆ ವಿಷಯವೆಲ್ಲ ನನಗೆ ತಿಳಿದ ಮೇಲೆ, ನಿಮ್ಮ ಮೇಲೆ ನನಗೂ ಗುಮಾನಿ ಹೆಚ್ಚಾಯಿತು" ಎಂದರು ಲಾಯರು ವೆಂಕೋಬರಾಯರು.

"ನೋವಿನಿಂದ ಸಂಕಟಪಡ್ತಾ ಇದ್ದ ಆ ನಿರ್ಭಾಗ್ಯ ವ್ಯಕ್ತಿಗೆ ನೆರವಾದುದೇ ತಪ್ಪಾಯ್ತು! ಇದನ್ನು ಹೇಗೆ ನಂಬಲಿ" ಅಂದ ಅಳುಮುಖದ ಕಕ್ಷಿಗಾರ.

"ತಿರುಗಿ ಶುರು ಮಾಡಿದರಲ್ಲ್ರೀ! ಅಳುಕ್ಕೆ. ಈ ತರಹ ಕಾರಣ ಹೇಳಿದರೆ ಮುಗೀತಲ್ರೀ ನಿಮ್ಮ ಆಟ. ಈ ಯುಗದಲ್ಲಿ, ಈ ಕಲಿಗಾಲದಲ್ಲಿ ನಮ್ಮ ಊರಿನಲ್ಲಿ ಪ್ರಾಣಿ ದಯೆಯಿಂದ ಪ್ರೇರಿತನಾಗಿ ಹೀಗೆ ಮಾಡಿದೆ ಅಂತ ಹೇಳಿದರೆ, ನಿಮ್ಮ ಪ್ರೇತಕ್ಕೂ ಶಿಕ್ಷೆ ವಿಧಿಸ್ತಾರಲ್ರೀ! ಎಷ್ಟುಸಾರಿ ಹೇಳಲೀರ್ರೀ" ಎಂದು ಲಾಯರು ವೆಂಕೋಬರಾಯರು ಬೇಸರ ಬಂದ ದನಿಯಲ್ಲಿ ಹೇಳಿದರು.

"ಇದು ಎಂಥದ್ರೀ ನೀವು ಅನ್ನೋದು, ನಮ್ಮ ಸಿಂಧನೂರಿನಲ್ಲಿ ಇವೆಲ್ಲ ಸಾಮಾನ್ಯ ನಡವಳಿಕೆ. ಎಲ್ಲರೂ ಒಬ್ಬರಿಗೊಬ್ಬರು ಕಷ್ಟ ಬಂದಾಗ ನೆರವಾಗ್ತಾರೆ

ಪರಿಚಯಸ್ಥರು ಅಪರಿಚಯಸ್ಥರು ಅಂತ ನೋಡೋದೂ ಇಲ್ಲ. ನಿಮ್ಮ ಊರಿನಲ್ಲಿ ಇದಕ್ಕೇ ವೊಕದ್ದಮೆ ಹೂಡಿದಾರಲ್ಲ! ಅಂತ ಕಕ್ಷಿಗಾರ ಉದ್ಗಾರ ತೆಗೆದ.

"ಇರಬಹುದು. ನಿಮ್ಮ ಸಿಂಧನೂರಿನಲ್ಲಿ ಎಲ್ಲರೂ ಸತ್ಯಸಂಧರೇ ಇರಬಹುದು. ಆದರೆ ನಮ್ಮ ರಾಜೀವಪುರ ಬಲು ನಾಜೂಕು, ಇಲ್ಲಿ ದರೋಡೆ ಖೂನಿ ಮಾಡೋರು ಕೂಡ ಅಹಿಂಸಾಮೂರ್ತಿಗಳಂತೆಯೇ ಕಾಣುತ್ತಾರೆ. ಸುಸಂಸ್ಕೃತ ಆಚಾರವಂತರ ಹಾಗೇ ನಡೆದುಕೊಳ್ಳುತ್ತಾರಲ್ಲ! ನಮ್ಮ ಹುಷಾರೀಲಿ ನಾವು ಇರಲೇಬೇಕು" ಎಂದರು ಲಾಯರು ವೆಂಕೋಬರಾಯರು.

"ಅದೆಲ್ಲಾ ಸರೀ ಸಾರ್! ಆದರೆ ನಾನು ಮಾಡಿದ ಅಪರಾಧ ಏನು? ಯಾವ ಗುಮಾನಿ ಯಾಕೆ ಬಂತು ಅದನ್ನಾದರೂ ಸರಿಯಾಗಿ ಬಿಡಿಸಿ ಹೇಳಿ. ಅದನ್ನಾದರೂ ತಿಳಿದುಕೊಂಡರೆ ನಂತರ ಸಮಜಾಯಿಷಿ ಹೇಳುಕ್ಕೆ ಅವಕಾಶ ಸಿಗಬಹುದು" ಎಂದ ಕಕ್ಷಿಗಾರ.

"ಏನೂ ತಿಳಿಯದ ಎಳೆ ಮಗು ಹಾಗೆ ಆಡ್ತಾ ಇದ್ದೀರಿ. ಆಗಲಿ ಬಿಡಿ ಕಡ್ಡೀನ ಎರಡು ತುಂಡು ಮಾಡಿದ ಹಾಗೆ ಹೇಳ್ಬಿಡ್ತೀನಿ. ಪೋಲೀಸಿನವರೂ ಇದೇ ಅನುಮಾನ ಹೊಂದಿದ್ದಾರೆ. ಕಿವಿಗೊಟ್ಟು ಕೇಳ್ರೀ!

ಇಲ್ನೋಡ್ರಿ. ಊರಾಚೆ ಸಂತೆಬೀದೀಲಿ ಒಂದು ವ್ಯಕ್ತಿ ಮಲಗಿತ್ತು. ನೀವು ಅದಕ್ಕೆ ಉಪಚಾರ ಮಾಡಿ. ಊರಿಗೆ ನಿಮ್ಮ ಗಾಡೀಲಿ ಕರೆತಂದು, ಹೋಟಲಲ್ಲಟ್ಟು, ಅದರ ಖರ್ಚನ್ನೆಲ್ಲಾ ಮುಂಗಡ ಕೊಡ್ತೀನಿ ಅಂತ ಕೊಟ್ಟಿರಿ. ನಂತರ ನಿಮ್ಮ ಹೋಟಲಿಗೆ ನೀವು ಹೋದಿರಿ.

ಬೆಳಿಗ್ಗೆ ಆ ವ್ಯಕ್ತಿ ಆ ಹೋಟಲಿಂದ ಪಲಾಯನ ಮಾಡಿತ್ತು. ಅಲ್ಲವೇನ್ರಿ" ಎಂದರು ಲಾಯರು ವೆಂಕೋಬರಾಯರು.

"ಹೌದು! ಏಟು ಬಿದ್ದಿತ್ತು, ನರಳ್ತಿತ್ತು. ಕೈಲಿ ಕಾಸಿತ್ತಿಲ್ಲ ಅದಕ್ಕೇ ಕನಿಕರಪಟ್ಟು, ಉಪಚಾರ ಮಾಡಿ, ನನ್ನ ಗಾಡೀಲೇ ಸಾಗಿಸಿ ಹೋಟಲಲ್ಲಿರು. ನಿನ್ನ ಖರ್ಚು ನೋಡಿಕೋತೀನಿ ಎಂದೆ, ತಪ್ಪೇನು?" ಎಂದು ಕೇಳಿದ ಕಕ್ಷಿಗಾರ.

ಅದೇ! ಅದನ್ನೇ ಹೇಳುಕ್ಕೆ ಬರುತಿದ್ದೆ. ಆ ವ್ಯಕ್ತಿ ನಮ್ಮೂರಿನಲ್ಲಿ ಸಕುಪ್ರಸಿದ್ಧಿ ಹೊಂದಿದ ದೊಣ್ಣೆರಾಮನ ಗುಂಪಿಗೆ ಸೇರಿದ್ದು ಅಂತ ತಿಳೀತು. ಸಾಮಾನ್ಯವಾಗಿ ಸಂತೆಯಿಂದ ಬರೋರು ಆ ರಸ್ತೇಲೆ ಬರ್ತಾರೆ. ಯಾವುದೋ ಪ್ರಾಣಿ ಅಸ್ತವ್ಯಸ್ತವಾಗಿ ಬಿದ್ದಿದ್ದರೆ ದಾರೀಲಿ ಹೋಗೋರು ಹತ್ತಿರ ಹೋಗ್ತಾರೆ ಒಬ್ಬೊಬ್ಬರೇ ಹಾಗೆ ಹೋದಾಗ ಆ ವ್ಯಕ್ತಿಯನ್ನು ಬಗ್ಗಿ ನೋಡಿದಾಗ, ಆ ವ್ಯಕ್ತಿ ಅವರನ್ನು ಗಟ್ಟಿಯಾಗಿ

ಹಿಡಿದುಕೊಂಡು ಅಯ್ಯಯ್ಯೋ ಅಂತ ಕೂಗಿ ಬಿಡುತ್ತೆ. ಆಗ ಎಲ್ಲಿಂದಲೋ ಮೂರು ನಾಲ್ಕು ಧಾಂಡಿಗರು, ದೊಣ್ಣೆರಾಮನ ಕಡೆಯೋರು, ಬಂದು, ನೆರವಿಗೆ ಬಂದಿದ್ದನಲ್ಲಾ ಅವನ್ನ "ಏನೋ ಕೋಳಿಕೆ, ಹೆಣ್ಣು ಹೆಂಗಸು ಬಳಲಿ ಮಲಗಿದ್ರೆ, ಅದೂ ರಸ್ತೆ ಅಂಚಲ್ಲಿ, ಅಲ್ಲಿ ಕಿತಾಪತಿ ಮಾಡುಕ್ಕೆ ಹೋಗ್ತೀಯಾ" ಅಂತ ಬೈದು ಹೊಡೆದು ಜೇಬಿನಲ್ಲಿದ್ದುದನ್ನು, ಸೊಂಟಕ್ಕೆ ಕಟ್ಟಿದ್ದನ್ನೂ ಕಿತ್ತುಕೊಂಡು ಊರಿಗೆ ಅಟ್ಟಿಬಿಡ್ತಾರೆ.

ಹಿಂದೆ ಪೋಲೀಸಿನ ತಂಡ ಒಂದು ಸಂತೆ ಪಹರೆ ಮುಗಿಸಿಕೊಂಡು ಊರಿಗೆ ಬರ್ತಿದ್ದರು. ಇದನ್ನು ನೀವು ಕಂಡು, ಗಾಡೀಲಿ ಬೇಗ ಬಂದು ಆ ವ್ಯಕ್ತಿಗೆ ಹುಷಾರು ಕೊಟ್ಟು, ಸಾಗಿಸಿಬಿಟ್ರಿ ಅಂತ ಪೋಲೀಸಿನವರ ಗುಮಾನಿ ...ನಂದೂನೂ." ಎಂದರು ಲಾಯರು ವೆಂಕೋಬರಾಯರು.

"ಇದೇನ್ರಿ ಹೀಗಂತೀರಿ. ಆ ಹೆಂಗಸು ಪಾಪ ಮೈ ಕೈ ಎಲ್ಲಾ ಜಜ್ಜಿಹೋ ಗಿತ್ತು. ಯಾರೋ ಚೆನ್ನಾಗಿ ತದುಕಿಬಿಟ್ಟಿದ್ದರು. ಮೇಲುಸಿರು ಬಿಡ್ತಾ ಇದ್ದಳು. ಹಣೆಯೆಲ್ಲಾ ರಕ್ತ ಆಗಿತ್ತು" ಎಂದ ಕಕ್ಷಿಗಾರ.

"ಹಾಗೆ ಅಂತ ನೀವು ಅಂತೀರಿ! ಅದಕ್ಕೆ ಸಾಕ್ಷಿ ಯಾರ್ರೀ! ಮಲಗಿದ್ದ ವ್ಯಕ್ತಿಗೆ ಏಟು ಬಿದ್ದಿತ್ತು ಅನ್ನೋದೇ ಸುಳ್ಳು ಅಂತಾರೆ ಪೋಲೀಸಿನವರು. ಏಟು ಬಿದ್ದಿದ್ದರೆ, ಮಾರನೆ ಬೆಳಿಗ್ಗೆ ಆ ಹೋಟಲಿಂದ ಯಾಕೆ ಪರಾರಿ ಆಗ್ತಾ ಇದ್ದಳು? ಮೂರು ದಿವಸದ ಖರ್ಚಿನ ಹಣ ಮುಂಗಡವಾಗಿ ನೀವು ಕೊಟ್ಟಿದ್ದಿರಂತೆ?" ಎಂದು ಲಾಯರು ವೆಂಕೋಬರಾಯರು ಹುಬ್ಬೆತ್ತಿ ಕೇಳಿದರು.

ಅವಳು ಯಾರು ಅನ್ನೋದೂ ಗೊತ್ತಿಲ್ಲ. ಮತ್ತೆ ಯಾಕೆ ಓಡಿ ಹೋದಳು ಅಂತ ಹೇಗೆ ಹೇಳಲಿ" ಎಂದು ಗೋಗರೆದ ಕಕ್ಷಿಗಾರ.

ಅಲ್ರೀ! ದಿಟವಾಗಲೂ ಆಕೆಗೆ ಪೆಟ್ಟು ಬಿದ್ದಿದ್ದರೆ, ಆಸ್ಪತ್ರೆಗೆ ಕರೆದುಕೊಂಡು ಹೋಗಿ ಸೇರಿಸ್ತಿರ್ಲಿಲ್ಲವೇನ್ರಿ? ಹೋಟಲಿಗೆ ಕರೆದುಕೊಂಡು, ಹೋಗಿ ಒಂಟಿಯಾ ಗಿರೋ ಬಲಿತ ಹೆಂಗಸನ್ನ ಸೇರಿಸಿದರೆ ಗುಮಾನಿ ಬರುಲ್ಲವೇನ್ರಿ!" ನೀವೇ ಹೇಳ್ರಿ! ಎಂದರು ಲಾಯರು ವೆಂಕೋಬರಾಯರು.

"ಮೊದಲು ಆಸ್ಪತ್ರೇಗೆ ಕರೆದುಕೊಂಡು ಹೋದೇರ್ರಿ! ಅಲ್ಲಿ ಗೇಟ್ ಭದ್ರ ವಾಗಿ ಹಾಕಿಬಿಟ್ಟಿತ್ತು. ಸಂಜೆ ನಾಲ್ಕರಿಂದ ಆರರ ತನಕ ಮಾತ್ರ ಪ್ರವೇಶ; ನಾಳೆ ಬೆಳಗ್ಗೆ ಬನ್ನಿ ಅಂತ ಗೇಟಿನ ಆಕಡೆಯಿಂದಲೇ ಕೆಂಪು ರುಮಾಲ ಕಾವಲು ಗಾರ ಹೇಳಿಬಿಟ್ಟ. ಗಾಡಿಯಲ್ಲಿದ್ದ ಆಕೇನೂ ಆಸ್ಪತ್ರೆಗೆ ಸೇರಿಸಬೇಡೀಪ್ಪಾ! ಎಲ್ಲಾ ದರೂ ಛತ್ರದ ಪಡಸಾಲೇಲಿ ಬಿಟ್ಟುಬಿಡಿ ಅಂತ ನರಳುಕ್ಕೆ ಶುರುಮಾಡಿದಳು. ಆ ಕಾವಲುಗಾರನ ದರ್ಪ, ಅವನ ಎಲಡಿಕೆ ರಂಗು, ಬೀಡಿ ಸೇದೋ ಜೋರು ಇವೆಲ್ಲ ವನ್ನೂ ಕಂಡಾಗ ಇವನೇ ಹೀಗೆ ಯಮದೂತನಂತೆ ಕಾಣಿಸಿದರೆ, ಒಳಗಿರೋ

ಅರಸರು ಇನ್ನು ಹೇಗೆ ಕಾಣಸ್ತಾರೋ ಅಂತ ನನಗೂ ಅನ್ನಿಸಿತು ಅದಕ್ಕೇ ಹತ್ತಿರವೇ ಸಿಕ್ಕಿದ ಮೊದಲ ಹೋಟಲಲ್ಲೇ ಅಕೇನ ಇಳಿಸಿದೆ.

ಇದಕ್ಕೂ ಸಾಕ್ಷಿ ಯಾರು ಅಂತ ನೀವು ಕೇಳ್ತೀರೇನೋ? ಆಸ್ಪತ್ರೆ ಯಮ ದೂತ ಬಂದು, ಇವರು ಗಾಡೀಲಿ ಬಂದಿದ್ದರು. ನಾಳೆ ಬನ್ನಿ ಅಂತ ನಾನು ಹೇಳಿಕಳಿಸಿದೆ ಅಂತ ದಿಟವಾಗಲೂ ಸಾಕ್ಷಿ ಹೇಳ್ತಾನೇನ್ರೀ! ಭಗವಂತ! ಈಗೇ ನ್ಮಾಡಲಿ" ಎಂದ ಕಕ್ಷಿಗಾರ.

"ನಿಮ್ಮ ಲಾಯರು ನಾನು ದಿಟ. ನೀವು ಹೇಳಿದ್ದನ್ನು ನಂಬ್ತೀನಿ ಅಂತ ಇಟ್ಟುಕೊಳ್ಳಿ. ಆದರೂ ಗುಮಾನಿ ಬರೋದಕ್ಕೆ ಸಾಕಷ್ಟು ಕಾರಣಗಳಿವೆ ಅಂತ ತೋರಿಸುಕ್ಕೆ ಹೇಳಿದೆ" ಎಂದರು ಲಾಯರು ವೆಂಕೋಬರಾಯರು.

"ನೀವಾದರೂ ನಂಬ್ತೀರಲ್ಲ! ರಾಜೀವ ಪುರದಲ್ಲಿ ಕಕ್ಷಿಗಾರ ಹೇಳಿದ್ದನ್ನ ಒಬ್ಬ ಲಾಯರಾದರೂ ನಂಬ್ತಾರಲ್ಲ! ಅದೇ ನನ್ನ ಪುಣ್ಯ. ತುಂಬಾ ವಂದನೆಗಳ್ರೀ ಸರ್" ಎಂದ ಕಕ್ಷಿಗಾರ.

"ನನ್ನ ನಂಬಿಕೆ ಕಟ್ಟಿಕೊಂಡರೆ ಏನು ಪ್ರಯೋಜನ. ಪೋಲೀಸಿನವರು ನೀವು ಹೇಳಿದ್ದನ್ನು ನಂಬಬೇಕು. ಜಡ್ಜಿಗಳೂ ನಂಬಬೇಕು. ಅದೆಲ್ಲಾ ಸುಲಭ ದಲ್ಲಿ ಆಗುತ್ತೈೇ? ವಿಪರೀತ ಖರ್ಚು ಮಾಡಬೇಕು. ನೋಡುಕ್ಕೆ ಸಣ್ಣ ಮೊಕದ್ದಮೆ ಹಾಗೆ ಕಂಡರೂ, ಎಳೆನಾಗರರೀ ಇದು! ಎಳೆನಾಗರ." ಎಂದು ಎಚ್ಚರಿಕೆ ಕೊಟ್ಟರು ಲಾಯರು.

"ರಾಜೀವಪುರ ಮುಂದುವರೆದ ಸಂಸ್ಥಾನ ಒಂದು ತಿಂಗಳಿದ್ದು ನೋಡಿ ಕೊಂಡು ಬಾ ಅಂತ ಸಿಂಧನೂರು ಸ್ನೇಹಿತರು ಹೇಳಿದರು. ಎರಡು ಸಾವಿರ ರೂಪಾಯಿ ತಂದಿದ್ದೆ. ನೂರು ಖರ್ಚಾಗಿದೆ. ಇನ್ನೂರನ್ನ ನನ್ನ ಹೋಟಲ ಮುಂಗಡ ಕೊಟ್ಟಿದ್ದೇನೆ. ಮಿಕ್ಕಿದ್ದೆಲ್ಲಾ ನಿಮ್ಮದೆ. ನೀವು, ಪೋಲೀಸಿನೋರು, ಜಡ್ಜಿಗಳು ಹೇಗೆ ಬೇಕಾದರೂ ಹಂಚಿಕೊಳ್ಳಿ. ಸಿಂಧನೂರಿಗೆ ಜೀವಸಹಿತ ಹಿಂತಿ ರುಗೋ ಹಾಗೆ ಮಾಡಿಸಿಕೊಟ್ಟರೆ ನಿಮ್ಮ ಚಿರಋಣಿ ಎಂದ, ದೈನ್ಯದಿಂದ ಕಕ್ಷಿಗಾರ.

ಸಿಂಧನೂರು ಶ್ರೀಮಂತ ಊರಿಗೆ ಹಿಂತಿರುಗಿ ಬಂದ. ಆಮೇಲೆ ನೋಡಿ, ಸಿಂಧನೂರಿನಲ್ಲಿ ಒಂದುವಾರ ಎಲ್ಲಿಲ್ಲೂ ರಾಜೀವಪುರದಲ್ಲಿ ತಮ್ಮೂರಿನವ ಪಡೆದ ಅನುಭವವನ್ನೇ ಜನ ಎಲ್ಲಾ ಮಾತನಾಡಿಕೋತಾ ಇದ್ದರು. "ಅಲ್ಲಾ! ಅಂಥಾ ಊರಿನಲ್ಲೂ ಮಳೆ ಬೆಳೆ ಆಗುತ್ತೈ? ಮಕ್ಕಳು ಮರಿ ಸಾಯದೆ ಹುಟ್ಟುತ್ತೈ" ಎಂದು ಮೂಗಿನ ಮೇಲೆ ಬೆರಳಿಟ್ಟುಕೊಂಡು ಬೆರಗ್ತಾ ಇದ್ದರು.

—ಪ್ರಸಾದ್.

ಬೇಗ ಕೊಡಿ ಸಾರ್....ಕೊಡಿ

ಸ್ಥಳ: ಗಾ॥ ಕಾಲೇಜಿನ ರಸಾಯನ ಶಾಸ್ತ್ರದ ಪ್ರಯೋಗಶಾಲೆ
ಕಾಲ: ಬಿ. ಯಸ್ಸಿ (ಸೆಪ್ಟೆಂಬರ್) ಪರೀಕ್ಷೆ (ಪ್ರಾಕ್ಟಿಕಲ್ಸ್)

" ಸಾರ್, ಒಂದ್ರೂಪಾಯಿ ಕೊಟ್ಬಿಡಿ ಸಾರ್ "

" ಅದೆಲ್ಲಾ ಆಗೊಲ್ಲ. ಎಂಟಾಣೆ "

" ಎಲ್ಲರೂ ಕೊಡ್ತಾ ಇದಾರೆ ಸಾರ್ "

" ಒಂದೇ ಮಾತ್, ಎಂಟಾಣೆ "

" ಇದೊಳ್ಳೇ ಯಾಪಾರ ಆಯ್ತಲ್ಲ. ಅಟೆಂಡರ್ ನ ಇಚಾರಿಸ್ಕೊಂಡು ಬರ್ತೀನಿ."

*　　　*　　　*　　　*

" ಒಂದ್ರೂಪಾಯಂತೆ ಸಾರ್. ಕಡಿಮೆ ಆಗೋಕಿಲ್ಲ "

" ಪೋಗಯ್ಯ, ಹೋಗಯ್ಯ ಮೂರು ಆವಾಗಲೇ ಕಂಡು ಹಿಡಿದಿದ್ದೀನಿ, ಇನ್ನೊಂದೆ ಇರೋದು "

" ಸುಮ್ಕೆ ಕೊಟ್ಬಿಡಿ ಸಾರ್, ಇನ್ನರ್ಧ ಗಂಟೇನೆ ಇರೋದು "

" ಎಂಟಾಣೆ ಅಷ್ಟೆ "

*　　　*　　　*　　　*

" ಒಪ್ಕೊಂಡವ್ರೆ ಸಾರ್, ಎಂಟಾಣೆ ತಗಂಬಾ ಅಂದ್ರು "

" ಏನೇನಂತಯ್ಯ "

" ನೀವು ಎಂಟಾಣೆ ಕೊಡಿಸಾರ್. ಇಚಾರಿಸ್ಕೊಂಡು ಬಂದು ಹೇಳ್ತೀನಿ "

" ನೀನು ಮೊದ್ಲು ವಿಚಾರಿಸ್ಕೊಂಡ್ ಬಾರಯ್ಯ "

" ಅಂಗೆಲ್ಲಾ ಏಳೋಕಿಲ್ಲ ಸಾರ್ "

" ನಾನು ದುಡ್ಡು ಕೊಡೋದಿಲ್ಲ, ಸಾರ್ "

*　　　*　　　*　　　*

" ಸ್ವಲ್ಪ ಈ ಕಡೆ ಬನ್ನಿ ಸಾರ್,—ಕ್ಯಾಲ್ಸಿಯಂ, ಬೇರಿಯಮ್ಮು, ನೈಟ್ರೇಡ್, ಪ್ಲೋರೈಡು ಅಂತೆ ಸಾರ್....ಸ್ವಲ್ಪ ಇರಿ. ಎಗ್ಜಾಮಿನರ್ರು ಈ ಕಡೇನೆ ನೋಡ್ತಿದಾರೆ ....ಹೂಂ ಬೇಗ್ ಕೊಡಿ ಸಾರ್ ...ಕೊಡಿ."

[ಆದರೆ ವಿದ್ಯಾರ್ಥಿ ಕೆಮಿಸ್ಟ್ರೀಲಿ ಈ ವರ್ಷ ಢುಂ.]

—ಚೋರ ರಾಮನ್

' ನಿಂಗ್ ಇಂಜ್ನೀರಿಂಗ್ ಸಿಕ್ರೆ '

(ವಿದ್ಯಾರ್ಥಿಗಳಿಗೆ ಮಾತ್ರ !)

[ರತ್ನನ " ನನ್ ಪುಟ್ನಂಜಿ ನಕ್ರೆ " ಇಂದ ಕದ್ದದ್ದು.
ಜಿ. ಪಿ. ರಾಜರತ್ನಂ ಅವರ ಕ್ಷಮೆ ಕೋರಿ]

ಮೂಗ ಆದಂಗ್ ಆಗ್ತೀಯ್ ನೀನು
ನಿಂಗ್ ಇಂಜ್ನೀರಿಂಗ್ ಸಿಕ್ರೆ !
ಏಳಬೇಕಂದ್ರೆ ಉಸ್ರೇ ಸಾಲ್ದು
ಉಕ್ ಬರ್ತಿದ್ರೆ ದುಕ್ಕ—
ನಿಂಗ್ ಇಂಜ್ನೀರಿಂಗ್ ಸಿಕ್ರೆ ! ೧

ಲಕ್ಕಂತ್ ಮೋಬ್ ನಿಂಗ್ ಅತ್ಕೊಂತೈತೆ
ನಿಂಗ್ ಇಂಜ್ನೀರಿಂಗ್ ಸಿಕ್ರೆ !
ಅಯ್ಯೊಂತ್ ಅಳ್ತಾ ಗೋಳಾಕ್ತೀಯಾ
ಆಮೇಲೆ ನಿನಗಾಗ್ ನೀನೇ
ನಿಂಗ್ ಇಂಜ್ನೀರಿಂಗ್ ಸಿಕ್ರೆ ! ೨

ಓದೋಕ್ ಅಳತೆ ಗಿಳತೆ ಇಲ್ಲ
ನಿಂಗ್ ಇಂಜ್ನೀರಿಂಗ್ ಸಿಕ್ರೆ ?
ಆಟಗೀಟ ಎಲ್ಲ ನೂನೆ
ಓದೋದ್ಕೊಂಡ್ರೆ ಮಾಸ್ಲು !
ನಿಂಗ್ ಇಜ್ನೀರಿಂಗ್ ಸಿಕ್ರೆ ! ೩

ಬರತಾ ಬರತಾ ಕಣ್ಣೀಗ್ ಗಲಾಸು
ನಿಂಗ್ ಇಂಜ್ನೀರಿಂಗ್ ಸಿಕ್ರೆ
ಎಂಗಿರತೈತೆ ಕೂದ್ಲು ಬೆಳ್ಳಾಗ್
ಕಣ್ಣಿಗ್ ಗಲಾಸು ಬಂದ್ರೆ
ಇಂಗೈತ್ ನಿಂಗೆ ಸಿಕ್ರೆ ! ! ೪

ದೆವ್ವದಂಗ್ ಕಾದೈತ್ ಅಲ್ಲೀನ್ ಪರೀಕ್ಷೆ
ನಿಂಗ್ ಇಂಜ್ನೀರಿಂಗ್ ಸಿಕ್ರೆ !
ಪುಕ್ಕ ಕಳಕೊಂಡ್ ನವಿಲ್ ಆದಂಗೆ
ಆಗ್ತೀಯ್ ನೀನು ಕಂಡ್ತ
ನಿಂಗ್ ಇಂಜ್ನೀರಿಂಗ್ ಸಿಕ್ರೆ ! ೫

ಕೈಯ್ಯಾಗಿನ್ ಪೆನ್ ನಿಲ್ಲಾಕಿಲ್ಲ
ನಿಂಗ್ ಇಂಜ್ನೀರಿಂಗ್ ಸಿಕ್ರೆ!
ಮೇಸ್ಟ್ರು ನಿನ್ನ ಗೋಳ್ ಆಡಿಸ್ತಾನೆ
ನಿಂಗ್ ಇಂಜ್ನೀರಿಂಗ್ ಸಿಕ್ರೆ!
ಸೇರಾಕ್ ಮುಂಚೆ ಜೋಕೆ! ೬

ಲೋಕವೇನೋ ಮೆಚ್ಕೊಂತೈತೆ
ನಿಂಗ್ ಇಂಜ್ನೀರಿಂಗ್ ಸಿಕ್ರೆ!
ಮೆಚ್ಕೊಂಡ್ ಯೋಳ್ತೈತ್ ಸೀಟ್ ಸಿಕ್ದಾಗ್
ಸೇರ್ದಿ ಹೋದೋನ್ಗೆ ಥೂಕ್ರೆ!"
ನಿಂಗ್. ಇಂಜ್ನೀರಿಂಗ್ ಸಿಕ್ರೆ ೭

ಬಿಡಲಿಕ್ ಆಗ್ದು ಕಟ್ಟಾಕ್ದಂಗೆ
ನಿಂಗ್ ಇಂಜ್ನೀರಿಂಗ್ ಸಿಕ್ರೆ!
ಸೋಕಿ ಗೀಕಿ ಎಲ್ಲಕೂನೆ
ಆಮೇಲೆಲ್ಲ ಚಕ್ರೆ
ನಿಂಗ್ ಇಂಜ್ನೀರಿಂಗ್ ಸಿಕ್ರೆ! ೮

ಯಿಂಗಿಂಗೆಂತ ಯೋಳಾಕ್ ಆಗ್ದೂ!
ನಿಂಗ್ ಇಂಜ್ನೀರಿಂಗ್ ಸಿಕ್ರೆ!
"ಇಸ" ಅನ್ನಾದು ಸಬ್ದ ಮಾತ್ರ!
ತಿಂದ್ ನೋಡ್ಬೇಕು ಬೇವಾ!
ಸೇರ್ತಿಯಾ ನಿಂಗ್ ಸಿಕ್ರೆ ೯

"ಸಂಪಾದಕರಿಗೆ"

ಉಚ್ಚ ಇದ್ನ ಬರದವ್ನಂತ
ಬಿಸಾಕ್ ಗಿಸಾಕ್ ಬೇಡಿ
ಯಾರದೋ ದಾಟೇನ್ ಕದ್ದವ್ನಂತ
"ಥೂ" ಅಂತ್ ಅನ್ಬೇಡಿ

ಯಾರದ್ ಕದ್ದೋ ಬಡ್ಡೀಮಗನೆ
ಅಂದ್ರೆ "ರತ್ನಪ್ನೋರ್‌ದು" ಅಂತೀನಿ
"ಕ್ಷಮಿಸರೀ ಬುದ್ಧೀ" ರತ್ನಪ್‌ನೋರೆ
ಬಡವನ್ ಮೇಲ್ ಕನಿಕರ್ಸಿ

—ನಾ. ಹಾ ಉಚ್ಚಯ್ಯ

ಕೀಲರಾಯಣದ ಕುರಿತು

ಒಂದು ಪ್ರಕರಣ

ಹತ್ತು ಗಂಟೆಗೆ ಆಫೀಸ್ ಷುರು. ಮಾಮೂಲಿನಂತೆ ಹತ್ತು ಇಪ್ಪತ್ತರ ಹೊತ್ತಿಗೆ ಗುಮಾಸ್ತರು ಒಬ್ಬೊಬ್ಬರಾಗಿ ಉದಯವಾದರು. ಹೆಡ್ ಗುಮಾಸ್ತೆ ಪುಟ್ಟಯ್ಯನವರೊಬ್ಬರು ಎಂಟೂವರೆಗೋ ಒಂಭತ್ತಕ್ಕೋ ಬಂದು ಕಸ ಗುಡಿಸು ವಾಕೆಗೆ ಒಂದಿಷ್ಟು ಗದರಿಸಿ ನಶ್ಯ ಏರಿಸುತ್ತಾ ನಡುನಡುವೆ ಫೈಲು ಮಗುಚುತ್ತಾ ಕುಳಿತಿರುತ್ತಾರೆ. ಉಳಿದವರಿಗೇನಷ್ಟು ಅವಸರ. ಹೋಟಲ್ ಷಾಲಿಮಾರ್‌ನ ಹುಡುಗ ಕಾಫಿ ತಿಂಡಿ ತರುವುದು ಹತ್ತೂವರೆಗಲ್ಲವೆ? ಎಮರ್ಜೆನ್ಸಿಯಾಗಲೀ ಅದ ರಪ್ಪನಾಗಲೀ ಒಂದೆರಡು ವಡೆ ಮುರಿದು ಅಥವಾ ಬೋಂಡ ಕಬಳಿಸಿ, ಕಾಫಿ ಹೀರಿ, ನಗೆ ಮಾತುಗಳ ನಡುವೆ ಒಂದು ಸಿಗರೇಟಿನ ಹೋಮ ಮಾಡಿದ ಮೇಲೆ ತಾನೆ ಕೆಲಸ ಪ್ರಾರಂಭ! ಅಷ್ಟರಲ್ಲಿ ಹನ್ನೊಂದು ಹನ್ನೊಂದೂಕಾಲು ಆಗುತ್ತೆ. ಹನ್ನೆರಡಕ್ಕೆ ಮತ್ತೆ ಲಂಚಿಗೆ ಹೊತ್ತಾಗುತ್ತೆ ಅನ್ನಿ.

ದಿನಚರಿಯೇನೋ ಹಾಗೆ. ಆದರೆ ಇವತ್ತು ಮಾತ್ರ ಕಥೆ ಬೇರೆಯೇ. ಗಂಟೆ ಹನ್ನೆರಡಾದರೂ ಯಾವುದೋ ಒಂದು ಚಿಕ್ಕ ವಿಷಯಕ್ಕೆ ಪರದಾಟ ನಡೆದಿತ್ತು. ಚಿಕ್ಕ ವಿಷಯವೇನು, ಅದೊಂದು ದೊಡ್ಡ ಸಮಸ್ಯೆಯೇ ಆಗಿತ್ತು.

ಆಫೀಸಿನೊಳಗೆ ನುಗ್ಗಿದ ಕೂಡಲೆ ರಿಕ್ರಿಯೇಷನ್ ಕ್ಲಬ್ಬಿನ ಇಂಗ್ಲೀಷ್ ದಿನ ಪತ್ರಿಕೆಗೆ ಕೈ ಹಾಕುವವನು ಬಜೆಟ್ ಗುಮಾಸ್ತೆ ಶೇಖರು ಆದರೆ ಇವತ್ತು ಆತ ಪತ್ರಿಕೆಯನ್ನೆತ್ತಿಕೊಂಡ ಕೂಡಲೆ ಕಂಡಿದ್ದೇನು? ಪತ್ರಿಕೆಯ ನಾಲ್ಕಾರು ಕಲಮುಗ ಳಷ್ಟು ಭಾಗವನ್ನು ಯಾರೋ ಕತ್ತರಿಸಿಬಿಟ್ಟಿದ್ದರು. ಕಂಡೊಡನೆ ಬಲು ರೇಗಿದ ಶೇಖರು ಉಳಿದವರೆಲ್ಲ ಒಬ್ಬೊಬ್ಬರಾಗಿ ಬಂದಾಗ ಯಾರ್ರೀ ... ಯಾರಿದು.... ಯಾರು ಹೀಗೆ ಕಟ್ ಮಾಡಿರಬಹುದು ಇಷ್ಟು ಬೇಗನೆ....ಥತ್....ಥತ್....ಥತ್ "

ಬಿಸಿಬಿಸಿಯಾಗಿ ಊಹಾಪೋಹಗಳು ನಡೆದೇ ನಡೆದುವು. ಷಾಲಿಮಾರಿನ ಕಾಫಿ ಬಂದಾಗ ಕೂಡ ಗಡಿಬಿಡಿಯಲ್ಲಿ ಹೀರಿ ಮುಗಿಸಿದ್ದಾಯಿತು. ಎಲ್ಲರ ಕಾತರವೂ ಪತ್ರಿಕೆಯ ನಾಲ್ಕು ಕಲಮುಗಳಿಗೆ ಕೈಕೊಟ್ಟ ತಸ್ಕರರಾರು ಎಂಬುದರ ಕುರಿತು.

ಅಷ್ಟರಲ್ಲಿ ಸಾಹೇಬರು ದಯೆಮಾಡಿಸಿದರು. ಅವರಿಂದ ಪತ್ರಿಕೆಗೆ ಬುಲಾವ್ ಬಂದಿತು. ಆರ್ಡರ್ಲಿ ತೆಗೆದುಕೊಂಡು ಹೋದ. ಈಗ ಎಲ್ಲರನ್ನೂ fire ಮಾಡದೆ

ಇರೋದಿಲ್ಲ ಎಂದ ಪ್ರಾಣೇಶ್ "ಇರಲಿ ಇರು ಅದೂ ಒಂದು ಮಜಾ" ಎಂದರು ಕೆಲವರು.

ನಿರೀಕ್ಷಿಸಿದಂತೆ ಸಾಹೇಬರು ಉರಿದು ಬಿದ್ದೇಬಿದ್ದರು. ಈಗ ಕೆಲವು ದಿನಗ ಳಿಂದ ಆಫೀಸಿಗೆ ಕಾಲಿಟ್ಟೊಡನೆ ಸಕ್ಕರೆ ಹಾಕದ ಕಾಫಿ ಹೀರುತ್ತ ಅರ್ಧ ಗಂಟೆ ಯಾದರೂ ಪೇಪರೋದದೆ ಅವರು ಯಾರನ್ನೂ ಯಾವುದನ್ನೂ ನೋಡುತ್ತಿರಲಿಲ್ಲ.

ಎಲ್ಲರಿಗೂ ಬುಲಾವ್ ಬಂತು. "ಪತ್ರಿಕೆಯನ್ನು ಟೇಬಲಿನಾಚೆ ಒಗೆದು ಯಾರ್ರೀ ಯಾರ್ರೀ ಯಾವ ಸ್ಕ್ಯಾಂಡ್ರಲ್ ಈ ಕೆಲಸಮಾಡಿದ್ದು" ಎಂದು ಆರ್ಭಟಿ ಸಿದರು. "ನಾನು ಬರೋವಾಗಲೇ ಹೀಗಿತ್ತು ಸಾರ್" ಎಂದು ತೊದಲಿದ ಶೇಖರು. "ಹೀಗಿತ್ತು ಎಂದರೆ ಪೇಪರಿನವರು ಹೊರಡಿಸುವಾಗಲೇ ಹೀಗೆ ಹರಕಲಾಗಿತ್ತೇ ನಯ್ಯ" ಎಂದು ಕೆಂಗಣ್ಣುಮಾಡಿ ಕೇಳಿದರು ಸಾಹೇಬರು ಎಲ್ಲರೂ ಉಸಿರುಕಟ್ಟಿ ಮಿಸುಕಾಡದೆ ನಿಂತರು. "ಆಫೀಸಿನಲ್ಲಿ ಇಂಥಾದ್ದು ನಡೆಯೋದಿದ್ದರೆ ಇನ್ನು ಉಳಿ ಗಾಲವಿಲ್ಲ. ಥತ್ ನಡೀರಿ ಆಚೆಗೆ" ಎಂದು ಕಿಟಕಿ ಹತ್ತಿರ ಹೋಗಿ ಉಗುಳಿದರು ಎಲ್ಲರೂ ಸರಸರನೆ ಹೊರಟುಹೋದರು, ತಲೆ ತಗ್ಗಿಸಿಕೊಂಡು — (ಕಿಲಾಡಿಗಳು ನಗು ತಡೆದುಕೊಂಡು).

ಸಾಹೇಬರು "very bad, very bad" ಎನ್ನುತ್ತಲೇ ಮೂವರು ಆರ್ಡರ್ಲಿಗಳನ್ನು ಕರೆದು ಪತ್ರಿಕೆಯ ಇನ್ನೊಂದು ಪ್ರತಿ ತರುವಂತೆ ಅವರನ್ನೆಲ್ಲ ಪೇಟೆಗೆ ಅಟ್ಟಿದರು, ಕಾಸು ಕೊಡದೆ. ಸ್ವಲ್ಪ ಹೊತ್ತಿನಲ್ಲಿ ಅವರೆಲ್ಲ ಹಿಂದೆ ಬಂದರು. "ಕಾಪಿಗಳೆಲ್ಲ ಮುಗಿದುಹೋಗಿದೆ" ಎಂದುಸುರಿದರು ಜೋಲು ಮುಖಹಾಕಿಕೊಂಡು.

ಆಕಡೆ ಮನೆಯವರನ್ನು ಕೇಳಿ ತೆಗೆದುಕೊಂಡು ಬಾ ಎಂದು ಒಬ್ಬ ಗುಮಾಸ್ತೆ ಯನ್ನು ಅಟ್ಟಿದರು. "ನಂದೇ ಓದಾಗಿಲ್ಲ ಅಂತ ತಿಳಿಸು ನಿಮ್ಮ ಸಾಹೇಬರಿಗೆ, ಅವರಿಗೆ ಆಫೀಸಿನಲ್ಲಿ ಬೇರೆ ಕೆಲಸ ಇಲ್ಲವೋ" ಎಂದು ಹೇಳಿಕಳುಹಿಸಿದ ಆ ಪಕ್ಕದ ಮನೆಯ ಮುದುಕ ಕಹಿಯಾಗಿ. ಸಾಹೇಬರು ಮತ್ತಷ್ಟು ರೇಗಿದರು. "ಹಾಗಂದ ನೋ, ಕಲಿಸ್ತೀನಿ ಅವನಿಗೆ" ಎಂದು ಹುಚ್ಚಾಗಿ ಆರ್ಭಟಿಸಿದರು.

ಆಚೆ ಬೀದಿಯ ಅವರ ಸ್ನೇಹಿತ ಎಂಜಿನಿಯರ ಮನೆಗೆ ಪೇಪರು ತರಲು ಜನ ಹೋಯಿತು. ಅಲ್ಲಿ ಎಷ್ಟು ಹುಡುಕಿದರೂ ಪೇಪರು ಸಿಗಲಿಲ್ಲ. ಕೊನೆಗೆ ನೋಡಿದರೆ ಎಂಜಿನಿಯರ ತಾಯಿ ಬೀಸುವ ಕಲ್ಲಿನಡಿಗೆ ಆಗಲೆ ಅದನ್ನು ಹಾಸಿ ಏನನ್ನೋ ಬೀಸುತ್ತಿದ್ದಳು. "ಬೀಸಿ ಮುಗಿದಮೇಲೆ ಕೊಡುತ್ತೇನಪ್ಪ" ಎಂದರವರು.

"ಎಲ ಎಲಾ ಏನು ಕಾಲ ಕೆಟ್ಟುಹೋಯಿತು ಷಾಲಿಮಾರ್ ಹೋಟಲಿಂದಾ ದರೂ ತನ್ನಿರೋ ಸುಮ್ಮನೆ ನಿಂತು ನೋಡ್ತಿದೀರಲ್ಲ" ಎಂದು ಚೀರಿದರು ಸಾಹೇ ಬರು ಅಲ್ಲಿ ಕೂಡ ಮೈಸೂರು ಪಾಕ್ ಕಟ್ಟಿ ಕೊಟ್ಟಾಗಿದೆ ತಿಳಿಸು ಎಂದರು. ಮಾತ್ರ ವಲ್ಲದೆ ಗುಟ್ಟಾಗಿ "ನಿಮ್ಮ ಸಾಹೇಬರಿಗೆ ಪೇಪರು ಕೊಟ್ಟರೆ ಹಿಂದೆ ಬರೋದಿಲ್ಲ"

ಎಂದ ಕ್ಯಾಷಿಯರ್. “ ಮಧ್ಯಾಹ್ನಕ್ಕೂ ಮೊದಲು ಮೈಸೂರು ಪಾಕು ಮೆಲ್ಲುವವರ ಹೊಟ್ಟೆ ಹಾಳಾಗಿ ಹೋಗಲಿ ” ಎಂದು ಶಪಿಸಿ ಸುಮ್ಮನಾಗುವುದರಲ್ಲಿದ್ದರು, ಸಾಹೇಬರು.

ಆಗಲೇ ಗಂಟೆ ಹನ್ನೆರಡೂವರೆ, ಹೊರಗಡೆ ಗುಮಾಸ್ತರು ಕೂಡ ಪೇಪರಿಗೆ ಕನ್ನ ಹಾಕಿದವರಾರು ಎಂಬ ಸಮಸ್ಯೆಯಲ್ಲಿಯೇ ಮುಳುಗಿದ್ದರು. ಅಷ್ಟರಲ್ಲಿ ಅಸಿಸ್ಟೆಂಟರು—ಅಂದರೆ—ಚಿಕ್ಕ ಸಾಹೇಬರ ಉದಯವಾಯಿತು. ಒಳಗೆ ಕಾಲಿಟ್ಟ ಕೂಡಲೆ ದೊಡ್ಡ ದೇವರಿಗೆ ಸಲಾಂ ಹೊಡೆದು ಹೋಗುವುದು ಸಂಪ್ರದಾಯವಷ್ಟೆ. ಹಾಗೆ ಸಲಾಂ ಹೊಡೆಯುವಾಗ ಅವರ ಕೊಂಕುಳಲ್ಲಿ ಮಡಚಿದ ಪತ್ರಿಕೆಯಿದ್ದುದು ಕಾಣಿಸಿತು ಸಾಹೇಬರಿಗೆ. “ಇಲ್ಲಿ ಕೊಡಿ ನೋಡೋಣ” ಎಂದು ಪತ್ರಿಕೆ ತೆಗೆದು ಕೊಂಡು ನಡುವಿನ ಪುಟದಲ್ಲಿ ಮೇಲೆ ಕೆಳಗೆ ಹುಡುಕಾಡಿದರು.

ಆಗ ಇಂಗಿತವನ್ನರಿತ ಚಿಕ್ಕ ಸಾಹೇಬರು “ಪ್ರೊಫ್ಯೂಮೋ ಕೇಸು ಇವತ್ತು ಬಂದಿಲ್ಲ ಸಾರ್...ಇವತ್ತು ಯಾವುದೋ ಬೇರೆ ಆರ್ಟಿಕಲ್ ಹಾಕಿದಾನೆ” ಎಂದರು.

ಪೇಪರ್ ತಾನಾಗಿ ಸಾಹೇಬರ ಕೈಯಿಂದ ಉದುರಿಹೋಯಿತು. “Absurd” ಅಂದರವರು ಮೂತಿ ಕಿವಿಚಿಕೊಂಡು. “ಸೀರಿಯಲೈಸ್ ಮಾಡುವಾಗ ಮಧ್ಯೆ ಬೇರೆ ತುರುಕೋದೆಂದರೆ ಏನು” ಎಂದು ಟೀಕಿಸಿ ಸಪ್ಪಗಾದರು.

ಕೀಲರಾಯಣವನ್ನು ಧಾರಾವಾಹಿಯಾಗಿ ಪ್ರಕಟಿಸುತ್ತಿದ್ದ ಆ ಪತ್ರಿಕೆಗೆ ಅವತ್ತು ಕ್ರಮ ತಪ್ಪಿ “ಆಲೂಗಡ್ಡೆಯಲ್ಲಿರುವ ಅನ್ನಾಂಶಗಳ” ಕುರಿತು ಲೇಖನ ಪ್ರಕಟಿಸುವ ಬುದ್ಧಿ ಏಕೆ ಬಂತೋ! ಆಗಲಿ ಆ ಲೇಖನವನ್ನು ಕೂಡ ಕತ್ತರಿಸಿ ತೆಗೆಯುವಷ್ಟು ಆಸಕ್ತಿಯುಳ್ಳ ಮಹಾನುಭಾವ ಯಾರಿರಬೇಕು ಎಂಬುದರ ಕುರಿತು ಮತ್ತಷ್ಟು ಊಹಾಪೋಹೆ ನಡೆದು ಕೊನೆಗದು ಪತ್ತೆಯಾಯಿತು.

ದಿನದ ಇಪ್ಪತ್ತು ನಾಲ್ಕು ಗಂಟೆಗಳ ಕಾಲವೂ ಆಹಾರ ಪದಾರ್ಥಗಳಲ್ಲಿ ಯಾವುದು ಒಳ್ಳೆಯದು ಯಾವುದು ಕೆಟ್ಟುದು ಎಂಬುದರ ಕುರಿತು ಜಿಜ್ಞಾಸೆ ಮಾಡುವ ಹೆಡ್ ಗುಮಾಸ್ತೆ ಪುಟ್ಟಯ್ಯನವರ ಕಿಸೆಯಲ್ಲಿ ಪತ್ರಿಕೆಯ ತುಂಡಿರುವುದನ್ನು ಯಾರೋ ಪತ್ತೆ ಹಚ್ಚಿ ಸಾಹೇಬರಿಗೆ ತಿಳಿಸಿದರು.

ಐನ್ ಸಮಯದಲ್ಲಿ ಕೈಕೊಟ್ಟ ಅವರಿಗೆ ಸಾಹೇಬರು ಛೀಮಾರಿ ಹಾಕಿದರು.

ಕೀಲರಾಯಣದ ಒಂದು ಅಧ್ಯಾಯ ಎಲ್ಲಿ ತಪ್ಪಿಹೋಯಿತೋ ಎಂದು ಚಡಪಡಿಸುತ್ತ ಗೊಂದಲಕ್ಕೊಳಗಾಗಿದ್ದ ನೌಕರ ವರ್ಗಕ್ಕೆ ಕೊಂಚ ಸಮಾಧಾನವಾಯಿತು. ಎಲ್ಲರೂ ಅವತ್ತಿನ ಹಗರಣದ ಕುರಿತು ನಗೆಮಾತುಗಳನ್ನಾಡುತ್ತ ಲಂಚಿಗೆ ತೆರಳುವಂಥವರಾದರು.

— ರಾಮಿ

ಎಲ್ಲಾ ಮನೇಲಿ !!

ಸುಪ್ರಭಾತದ ಸಮಯ. ಮಂಜುಳ ಘಂಟಾನಾದದ ಹಿಮ್ಮೇಳನದಲ್ಲಿ ಅತಿ ಅತಿಯಾಗಿ ಬರುತ್ತಿದ್ದ ಮಧುರಗೀತ ಕೇಳಲು ಬಲು ಇಂಪಾಗಿತ್ತು. ಪಕ್ಕದಮನೆ ರೇಡಿಯೋನೇ ನಾವು ಕೇಳೋದು! ನಾವು ಅವರು ತುಂಬಾ ಹತ್ತಿರ ಹತ್ತಿರ. ಕೇವಲ 9 ಇಂಚಿನ ಗೋಡೆ ನಮಗೂ ಅವರಿಗೂ ಮಧ್ಯೆ! ಸುಪ್ರಭಾತ ಕೇಳಲಿ ಅಂತ ಮಲ್ಲಿಕಾರ್ಜುನಯ್ಯನೇ ಖುದ್ದು ನಮ್ಮನೆ ಕಡೆ ಇರೋ ಕಿಟಕಿ ಬಾಗಲು ತೆರೆದು ಹೋಗ್ತಾನೆ. ಒಂದೊಂದು ಸಲ ಸರಿಯಾಗಿ ಕೇಳಿಸದೆ ಇದ್ದಾಗ Volume please ಎಂದು ನಾವೇ ಮಾನ ಬಿಟ್ಟು ಕಿರುಚುತ್ತೇವೆ. ಆಗ ರೇಡಿಯೋ ಜೋರಾಗುತ್ತದೆ. ಇಂಥ ಮಧುರ ಬಾಂಧವ್ಯ ನಮ್ಮದು, ಅವರದು ಈ ಕಾಲದಲ್ಲಿ ಹೀಗೆ ಎಲ್ಲಾದರೂ ಉಂಟೆ ಎನ್ನಬಹುದು ಎಷ್ಟೋ ನೆರೆಹೊರೆಯವರು.

ನಿನ್ನೆ ಮಲ್ಲಿಕಾರ್ಜುನಯ್ಯ ಮಾಮೂಲಿನಂತೆ ಬೇಗಲೇ ಹಾಸಿಗೆಯಿಂದ ಎದ್ದನಂತೆ! ಕಾಫಿ ಕುಡಿದನಂತೆ! ಸುಪ್ರಭಾತ ಮುಗಿದು ಆಗಲೇ ರಾಜಕಪೂರನ ಹಾಡು ಪ್ರಾರಂಭವಾಗಿತ್ತಂತೆ! ದೇಶಭಕ್ತಿಯನ್ನು ಪ್ರೇರೇಪಿಸುವ ಹಾಡಂತೆ! ಕಾಫಿ ಕುಡಿದು ಹಾಡನ್ನು ಕೇಳಿದ ಮಲ್ಲಿಕಾರ್ಜುನಯ್ಯ ಒಮ್ಮೆಯೇ ಉಗ್ರವಾಗಿ ಪಕ್ಕದಲ್ಲೇ ನಿಂತಿದ್ದ ಹೆಂಡತೀನ ಪರಚಿ ತುಂಡು ತುಂಡು ಮಾಡ್ತೀನಿ ಅಂತ ಎರಗಿದನಂತೆ! ಅಚ್ಚ ಹಳದಿ ಬಣ್ಣದ ಸೀರೆಯುಟ್ಟು ಅರಶಿನದ ಕೆನ್ನೆಗಳಿಂದ ಶೋಭಿಸುತ್ತಿದ್ದ ಮಾಲಕ್ಷಮ್ಮ ಕಿಟಾರನೆ ಕಿರುಚುತ್ತ ಯಜಮಾನರಿಗೆ ಜ್ವರ ಬಂದಿದೆಯೇನೋ ಎಂದು ಹಣೆ ಮುಟ್ಟಿ ನೋಡಿದರಂತೆ! ಜ್ವರದ ತಾಪವೇನೂ ಕಾಣಲಿಲ್ಲವಂತೆ! ಮನೆಯವರಿಗೆ ಏನಾಯ್ತು ಎಂಬುದೇ ಗೊತ್ತಾಗಲಿಲ್ಲವಂತೆ! ಆಗ—

"ಏಳ್ರಿ, ಕಾಫಿ ಆಯ್ತು" ಎಂದು ಆದರ ಧ್ವನಿಯಲ್ಲಿ ನಿದ್ದೆಯಿಂದೆಬ್ಬಿಸುತ್ತಿದ್ದೆ, ಮನದನ್ನೆಯನ್ನು–ನಾನು–ನಮ್ಮ ಮನೆಯಲ್ಲಿ!

ಮಾಲಕ್ಷಮ್ಮನ ಹಿರಿ ಮಗಳು ಮಂಡೋದರಿ ಏದುಸಿರು ಬಿಡುತ್ತಾ ಓಡಿ ಬಂದಳು. "ರೀ ಕಾಫಿ ಯಾರಿಗೂ ಕೊಡಬೇಡ್ರಿ, ಕಾಫಿಪುಡೀಲಿ ಯಾವುದೋ ಅಪಾಯಕಾರಿ ವಸ್ತು ಬೆರಕೆಯಾಗಿರಬೇಕು ರಾತ್ರಿ ನಿಮ್ಮನೆಯಿಂದ ಕಾಫಿ ಪುಡಿ ತೊಗೊಂಡು ಹೋಗಿದ್ದನಲ್ಲ ಎರಡು ಚಮಚ. ನಮ್ಮ ತಂದೆಗೆ ಕಾಫಿ ಮಾಡಿ

ಕೊಟ್ಟರು. ಕುಡಿದು ಹೇಗೆ ಹೇಗೋ ಆಡ್ತಾ ಇದ್ದಾರೆ, ಮೈಮೇಲೆ ದೇವರು ಬಂದ ಹಾಗೆ" ಎಂದಳು. ಆ ಹುಡುಗಿ ಹೀಗೆ ಹೇಳುತ್ತಲೇ ನಾನು ನನ್ನ ಮನದನ್ನೆಗೆ ಸಿದ್ಧಮಾಡಿದ್ದ ಕಾಫಿಯನ್ನು ಬಚ್ಚಲಿನಲ್ಲಿ ಸುರಿದೆ! ಸುರಿಯುತ್ತಿದ್ದ ಹಾಗೇನೇ ಮಾಲಕ್ಷಮ್ಮ ತಮ್ಮ ಮನೆಯಿಂದ ಕಾಫಿ ಪುಡಿ ಕಳಿಸಿದರು. ಸಧ್ಯ ಜೀವ ಬಂತು ಎಂದುಕೊಂಡು ನಿಮಿಷದಲ್ಲಿ ಕಾಫಿ ಮಾಡಿ, ಕಪ್ಪು ಸಾಸರಿನ ಠಣ್ ಠಣ್ ನಾದ ವನ್ನು ಅಡಿಗೆ ಮನೆಯಿಂದ ಮಾಮೂಲು ಟೈಮಿಗೇ ಬಿತ್ತರಿಸಿದೆ! "ನಿದ್ದೆ ಸಾಕಿನ್ನೀಗ, ಮುದ್ದುಕಗಿಣಿ ಬಾರ.." ಎನ್ನುತ್ತಾ. ಮನದನ್ನೆ ಸಮರ ಗೀತೆ ಪಾಡುತ್ತಾನೇ ಕಾಫಿ ಬಟ್ಟಲನ್ನು ಕೈಗೆ ತೊಗೊಂಡಳು! ಗುಟುಕು ಗುಟುಕಾಗಿ ಕಾಫಿ ಹೀರುತ್ತಾ ಹೀರುತ್ತಾ ಇದ್ದ ಹಾಗೇನೇ ಕೋಪವೆಲ್ಲಾ ಮಾಯವಾಗಿ ಅವಳ ಮುಖದಲ್ಲಿ ಮಂದಹಾಸ ಬೀರುವುದಕ್ಕೆ ಪ್ರಾರಂಭವಾಯ್ತು. ನಿತ್ಯವೂ ಕುಡೀತಿದ್ದ ಕಾಫೀನೇ ಅಲ್ವೆ ಇವತ್ತೂನೂ! ಅದರೆ ಹೇಳುವುದಕ್ಕೆ ಆಗದಂಥ ಬದಲಾವಣೆ! ಏಳುತ್ತಲೆ ಸಿಡಿ ಸಿಡಿ ಮಾತಾಡುತ್ತಿದ್ದಾಕೆ ಇವತ್ತು ಕಾಫಿ ಕುಡಿಯುತ್ತಲೇ ಹೂವಿನಷ್ಟು ಮಧುರವಾಗಿ ಮಾತಾಡಿಸಬಹುದೇ? ಯಾರಾದರೂ ಕಂಡಿದ್ದರೆ ಮಗುವಿನಂಥ ಹೃದಯ ಈಕೇದು ಅಂತ ಅನ್ನುತ್ತಿದ್ದರು. ಯಾವ ಕಾಲಕ್ಕೆ ಹೇಗೋ ಜೀವನ ಸಂಗಾತಿ, ಹೇಳುಕ್ಕೆ ಬರದು, ಏನು ಬೇಕಾದರೂ ಜೀವನದಲ್ಲಿ ನಡೆಯ ಬಹುದು ಎಂದುಕೊಂಡು ಕಾಫಿ ಬಟ್ಟಲನ್ನು ಕೈಗೆ ತೊಗೊಂಡೆ! ಅಷ್ಟು ಹೊತ್ತಿಗೆ—

ಮಲ್ಲಿಕಾರ್ಜುನಯ್ಯ ತಣ್ಣಗಾಗಿದ್ದ! ಅವನ ಮುಖದಲ್ಲಿದ್ದ ಆವೇಶ ಇಳಿದು ಸೌಮ್ಯವಾಗಿದ್ದ. ಕಣ್ಣಿನ ನೋಟವೂ ತಿಳಿಯಾಗಿತ್ತು. "ಏನಾಗಿತ್ತು, ಮಲ್ಲಿಕಾ ರ್ಜುನಯ್ಯ" ಎಂದೆ. ಏನಂತ ಹೇಳಲಿ, ಒಂದೂ ಗೊತ್ತಾಗುಲ್ಲ" ಎಂದ. "ಸೈನ್ಯಕ್ಕೆ ಸೇರ್ತೀನಿ ಅಂತ ಹೇಳ್ತಾ ಇದ್ದೆಯಲ್ಲ ಅದೇನಾದರೂ ಕನಸು ಬಿತ್ತೆ" ಎಂದು ಕೇಳಿದೆ. ಅವನಿಗೆ ಏನಾಯ್ತು ಎಂಬುದೇ ಗೊತ್ತಾಗಲಿಲ್ಲವಂತೆ! ರಾಜಕಪೂರ್ ವೀರಾವೇಶದಿಂದ ಹಾಡುತ್ತಿದ್ದನಂತೆ!

ಶತ್ರುಗಳ ತಲೆಗಳನ್ನು ಸೀಳಿ ಚೆಂಡಾಡಿ ಎಂದು ಸಾರುತ್ತಿದ್ದರಂತೆ! ಒಮ್ಮೆಲೇ ಇವನಿಗೆ ದೇಶಪ್ರೇಮ ಉಕ್ಕಿ ರಕ್ತ ಕುದಿತಂತೆ! ಆಗಲೇ ಮಾಲಕ್ಷಮ್ಮ ಕಾಫಿ ತಂದರಂತೆ! ರೂಮಿನಲ್ಲೆಲ್ಲಾ ಬರೀ ಹಳದೀಬಣ್ಣವೇ ತುಂಬಿ ಹೋದಂತೆ ಆಯಿತಂತೆ! ಎಲ್ಲರನ್ನೂ ತುಳಿದು ಧ್ವಂಸಮಾಡಲು ಪ್ರೇರೇಪಿಸುತ್ತಾ ಇತ್ತಂತೆ!

"ಕೊಟ್ಟ ಕೈ" ಎಂದುಕೊಂಡೆ ಮನಸ್ಸಿನಲ್ಲೇ ಅದನ್ನೆಲ್ಲಾ ಕೇಳಿ! "ದೇಶ ಭಕ್ತಿ ಚಿಮ್ಮಿದರೆ ಹೆಂಡತಿ ಕೆನ್ನೆ ಚಿವಟಲು ಯಾರಾದರೂ ತೊಡಗುವರೆ" ಎಂದೆ! "ನಾ ಏನ್ ಹೇಳಲಿ ಅದಕ್ಕೆಲ್ಲಾ!,—ಚೀಣಾದೇಶದ ರಾಕ್ಷಸಿಯೇ ಎದುರಿಗೆ ಬಂದು ನಿಂತಂತಾಯ್ತು! ಅದಕ್ಕೇ ಒಗೆದು ಬಿಡೋಣ ಎನ್ನಿಸ್ತು" ಎಂದ ಅಷ್ಟು ಹೊತ್ತಿಗೆ ಮಾಲಕ್ಷಮ್ಮ ಹಳದಿ ಸೀರೆ ಬಿಚ್ಚಿ ತಿಳಿ ಹಸರು ಸೀರೆ ಉಟ್ಟುಕೊಂಡೇ ಈಚೆಗೆ

ಬಂದರು. ಅನುಮಾನದಿಂದಲೇ ಅವರು "ನೀವು ಕಾಫಿ ಪುಡಿ ಎಲ್ಲಿ ತರ್ರೋದು" ಅಂತ ಕೇಳಿದರು ಅವರು ಪ್ರಶ್ನೆ ಮುಗಿಸುತ್ತಿದ್ದ ಹಾಗೇ ನನ್ನ ತಲೆಯಲ್ಲಿ ಸಿಯಾನ್ ಲೈಟ್ ಹತ್ತಿಕೊಂಡಂತೆ ಏನೋ ಧಟಕ್ಕನೆ ಮಿಂಚಿತು—!

"ನೀವು ಎಲ್ಲಿಂದ ಕಾಫಿ ಪುಡಿ ತರ್ರೋದು" ಎಂದು ನಾನೇ ಅವರನ್ನು ಕೇಳಿದೆ.

"ಪ್ರಹ್ಲಾದ ಕಾಫಿ ವರ್ಕ್ಸ್"ನಿಂದ ಎಂದರು ಅವರು. ಹೋ! ತಿಳೀತು! ಇಬ್ಬರ ಮನೆಯಲ್ಲೂ ಆದ ವ್ಯತ್ಯಾಸಕ್ಕೆ ಅದೇ ಕಾರಣ! "ನಮ್ಮನೇದು ನರಸಿಂಹ ಕಾಫಿವರ್ಕ್ಸ್‌ನ ಪುಡಿ ಕಣ್ರಿ" ಎಂದು ಕೂಗಿಕೊಂಡು ಮನೆಕಡೆ ಹೊರಟೆ! ಆಗ ಗಂಟೆ 7-45. ಲಡಕ್ ಸರಹದ್ದಿನಲ್ಲಿ ಚೀಣೀಯರು ಸೈನ್ಯವನ್ನು ಜಮಾಯಿಸಿರುವರೆಂಬ ಸುದ್ದಿಯು ಬಾನುಲಿಯಲ್ಲಿ ಏಕಪ್ರಕಾರವಾಗಿ ಪ್ರಸಾರವಾಗುತ್ತಿತ್ತು !!!

—ಹಾ. ರಾ.



ಅಪ್ಪ ಹಾವುನ್ನ ತೊಂಗಡೋಗಲ್ಲ, ಭೂಲೋಕದಲ್ಲಿ ಹೊಟ್ಟೆ ತುಂಬ ಆಹಾರ ತಿಗಲ್ಲ ಈಗ "ನನಗೆ"

ಹೋಂ ಸೈನ್ಸ್

ನಮ್ಮನೆಯಾಕೆಗೆ ಅಡಿಗೆ ಮಾಡೋದನ್ನೂ ನಾನೇ ಕಲಿಸಬೇಕಿತ್ತು. ನಾನು ಮದುವೆಯಾದ ಹೊಸದ್ರಲ್ಲಿ ಕಾಫೀ ಮಾಡೂ ಅಂದ್ರೆ ಕಲಗಚ್ಚು ಮಾಡೋಳು, ಸಾಗು ಮಾಡೂ ಅಂದ್ರೆ ಸಾಂಬಾರ್ ಮಾಡೋಳು! ಈ ಗೋಳನ್ನು ತಡೀಲಾರ್ದೆ ನಮ್ಮೂರಿನ "ಹೋಂ ಸೈನ್ಸ್" ಕೋರ್ಸಿಗೆ ಅವಳನ್ನು ಸೇರಿಸಿದೆ. ಇಂಥ ಕೋರ್ಸು ಗಳನ್ನೆಲ್ಲಾ ತೆಗೆದ ನಮ್ಮ ವಿದ್ಯಾ ಇಲಾಖೆಯವರನ್ನು ಎಷ್ಟು ಪ್ರಶಂಶಿಸಿದರೂ ಸಾಲದಲ್ಲವೇ!

ಇವಳದೂ ವರ್ಷ ಮುಗೀತಾ ಬಂತು. "ಎಲ್ಲಾ ಪ್ರಶ್ನೆಪತ್ರಿಕೆಗಳೂ ಲೀಕ್ ಆದರೆ ಪ್ರಾಕ್ಟಿಕಲ್ Queಶ್ನೆ (Question × ಪ್ರಶ್ನೆ) ಗಳು ಲೀಕ್ ಆಗೋಲ್ವಲ್ಲ" ಅಂತ ನನ್ನ ಮುಂದೆ ಮನೇಲಿ ಅತ್ತಳು.

"ಅಳಬೇಡವೇ, ನೀನು ಪಾಸಾಗ್ತೀ ಇರ್‍ತೀಯ, ನನ್ನಂಥವನು ನಿನಗೆ ಅಡಿಗೆ ಮಾಡೋದೆಲ್ಲಾ ಹೇಳಿಕೊಟ್ಟಿರುವಾಗ?" ಅಂತಾ ಸಮಾಧಾನ ಮಾಡ್ತಾ ಚಾಕಲೇಟ್, ಬಿಸ್ಕೆತ್, ಚಿಗುಳಿ ಉಂಡೆ ಕೊಟ್ಟೆ.

ಮಾರನೇ ದಿನ ಪ್ರಯೋಗಶಾಲೆಯಲ್ಲಿ ನಿಯಮಿತ ಕಾಲಕ್ಕೆ ಪರೀಕ್ಷೆ, ಕ್ಲುಪ್ತ ಕಾಲಕ್ಕೆ ಗಂಟೆ ಬಡಿದರು.

ಮೇಡಂ: "ಆಫೀಸಿನಿಂದ ದಣಿದು ಬಂದ ನಿಮ್ಮ ಯಜಮಾನರಿಗೆ ಸಂಜೆಯ ಉಪಹಾರಕ್ಕಾಗಿ ಇಲ್ಲಿರಿಸಿದ ಸಾಮಾನುಗಳಿಂದಲೇ ಉಪ್ಪಿಟ್ಟು, ಕಾಫೀ ತಯಾರಿಸ ಬೇಕು. ಸಮಯ ಒಂದು ಘಂಟೆ" ಎಂದು ಸವಾಲು ಹಾಕಿ ಚೇರನ್ನು ಅಲಂಕರಿ ಸಿದಳು.

"ಅಯ್ಯೋ ಒಂದೇ ಗಂಟೇನೇ! ಅಷ್ಟರಲ್ಲಿ ಯಜಮಾನರಿಗೆ ಮೂರು ಸಲ ಬೇಕಾದ್ರೂ ಉಪ್ಪಿಟ್ಟು ಕಾಫಿ ತಿನ್ನಿಸಬಹುದು." ಎಂದವಳೇ ಸೆರಗನ್ನು ಎಳೆದು ಸಿಕ್ಕಿಸಿಕೊಂಡೇ ಬಿಟ್ಟಳು ನನ್ನ ಶಿಷ್ಯೋತ್ತಮೆ

ಸಾಮಾನುಗಳನ್ನು ಆಯ್ದುಕೊಳ್ಳಲು ಮುಂದೆ ಬಂದಾಯಿತು. ಆದರೆ ಮರುಕ್ಷಣ ಎಲ್ಲರೂ ಕಕ್ಕಾವಿಕ್ಕಿಯಾಗಿ ಒಬ್ಬರ ಮುಖ ಒಬ್ಬರು ನೋಡಿದರು. ಏಕೆಂದರೆ ಬೆಲ್ಲದ ಜೊತೆಯಲ್ಲಿ (ಸಕ್ಕರೆ ಕಂಟ್ರೋಲಲ್ಲವೇ!) ಕಾಫಿ ಪುಡಿ ಬದಲಾಗಿ

ಚಹಾಪುಡಿ ವಿರಾಜಿಸುತ್ತಿತ್ತು. ಕಿಲಾಡಿ ವಿದ್ಯಾರ್ಥಿನಿ ಒಬ್ಬಳು ಕೆಮ್ಮುತ್ತಾ, "ಮೇಡಂ, ಚಹಾಪುಡಿಯಿಂದ ಕಾಫೀ ತಯಾರಿಸುವುದು ನಮ್ಮ "ಸಿಲಬಸ್" ನಲ್ಲಿಯೇ ಇಲ್ವಲ್ಲ! ಅದನ್ನು ನಮಗೆ ಕಲಿಸ್ಲೂ ಇಲ್ಲ" ಎಂದಳು ಧೈರ್ಯ ಮಾಡಿ.

ಕೂಡಲೇ ಬಂತು ಮೇಡಂನಿಂದ ಕರೆಕ್ಷನ್ ಮೆಮೋ—ಕಾಫಿ ಮಾಡಿರೆಂದು ಆ ಕ್ಷಣ ನನ್ನಾಕೆಯ ಸಂತೋಷ ಹಾಲು ಉಕ್ಕಿ ಬಂದಂತೆ |ಬಂತು ನೊರೆ ನೊರೆಯಾಗಿ! ಉಪ್ಪಿಟ್ಟು ಮಾಡಿಯಾದ ಮೇಲೆ, ನೀರು ಕಾಯಿಸಿ, ಸ್ಕೂಲಿನವರು ತಂದಿರೋ ಕಾಫಿ ಪುಡಿ ಎಂಥದೋ, ಸ್ಟ್ರಾಂಗ್ ಕಾಫಿ ಆಗದೆ ಹೋದೀತು" ಎಂದು ಯೋಚನೆ ಮಾಡಿ ಒಮ್ಮೆ ಅಚೆ ಈಚೆ ನೋಡಿ ಮೆಲ್ಲನೆ ಸ್ಕೂಲ್ ಕಾಫೀಪುಡೀ ಪೊಟ್ಟಣವನ್ನು ತನ್ನ ಸೊಂಟಕ್ಕೆ ಸೇರಿಸಿ, ಮನೆಯಿಂದ ತಂದಿದ್ದ ಪ್ಯಾಕೆಟ್‌ನ ನಿಧಾನವಾಗಿ ತೆಗೆದಳು ಸೊಂಟದಿಂದ, ಅದರಿಂದ ಕಾಫೀ ಮಾಡಿದಳು.

ನಾನು ಆಫೀಸಿನಿಂದ ಮುಂಚೆ ಮನೇಗೆ ಬಂದು ನನ್ನ ನಶ್ಯದ ಪುಡಿ ಹುಡುಕಿದೇ-Research ಮಾಡಿದೆ ಈಗಿನ ಕಾಲ್ದೋರ್ಥಾಗೆ, ನಶ್ಯದ ಪುಡಿ ಸಿಗಲೇ ಇಲ್ಲ ಇದ್ದವರಿಬ್ಬರಲ್ಲಿ ಕದ್ದವರ್ಯಾರೂಂತ ನನ್ನಾಕೆಮೇಲೆ ಗುಮಾನಿ ಬಂತು!

ಅವಳು ಮನೇಗೆ ಬಂದಮೇಲೆ ಕೇಳಿದೆ ಆಗ ತಿಳಿಯಿತು. ಆಕೆ ಮರೆತು ನನ್ನ ನಶ್ಯದ ಪುಡೀನ ಕಾಫೀ ಪುಡೀಂತ ತಿಳ್ಕೊಂಡು ಸೊಂಟದಲ್ಲಿಟ್ಕೊಂಡು ಹೋಗಿ ಹೋಂ ಸೈನ್ಸ್ ಪ್ರಾಕ್ಟಿಕಲ್ಸ್‌ನಲ್ಲಿ ಕಾಫಿ ಮಾಡಿದ್ಳೂಂತ!

ನಾನು ಬಿದ್ದು ಬಿದ್ದು ನಕ್ಕೆ! (ಎಲ್ಲಿಯೂ ಗಾಯ ಮಾಡಿಕೊಳ್ಳದೆ!) ಆದರೆ ನನ್ನವಳಿಗೆ ಮಾತ್ರ ನಕ್ಕಪೆಟ್ಟಿನ ಗಾಯವಾಯಿತು.

ರಿಝಲ್ಟ್

೧. ನನ್ನಾಕೆ ಮೊದಲನೇ ರ‍್ಯಾಂಕ್ ಗಳಿಸಿದ್ದಳು!

೨. "ಹೋಂ ಸೈನ್ಸ್" ಮೇಡಂಗೆ ನೆಗಡೀ ಬೇನೆ ಹತ್ತು ವರ್ಷವಾದರೂ ಹತ್ತಿರ ಸುಳಿಯೋಲ್ವಂತೆ !!

೩. ನನ್ನಾಕೆ, ದಣಿದು ಬಂದಾಗ ಹುಚ್ಚು ಬಿಡಿಸೋ ಕಾಫಿ ತಯಾರಿಸಲು ಕಲಿತಳು !!!

ಈ ಯಶಸ್ವೀ ಪ್ರಯೋಗವನ್ನು ನೀವೂ ಪ್ರಯೋಗಿಸುವಿರಾ! ಹಿ .. ಹಿ .. ಹಿ ಎಷ್ಟೇ ಆಗಲಿ "ಹೋಂ ಸೈನ್ಸ್" ಅಲ್ಲವೇ!

—ಹಾ. ನ್ಯ. ಸೂರಿ

ಮುರಾರ್ಜಿ ಭಾಯಿಯಾ ಜೀಯೋ!

ಊರವರಿಗೆಲ್ಲಾ ಕಿಟ್ಟುವಿನ ಭವಿಷ್ಯದ ಬಗ್ಗೆ ಬಹಳ ಆಸ್ಥೆ ಇದ್ದಿತು. ಅಂಗಡಿ ಬೀದಿ ಸುಬ್ಬಯ್ಯ ಶ್ರೇಷ್ಠಿ ಮೊದಲಗೊಂಡು ಜನಿವಾರದ ಉಪಾದ್ರವರೆಗೆ ಎಲ್ಲರಿಗೂ ಅವನದೇ ಚಿಂತೆ. ಎಲ್ಲಿ ಸಿಕ್ಕಿದರಲ್ಲಿ ಕೇಳಿದ ಪ್ರಶ್ನೆಯನ್ನು ಮತ್ತೆ ಮತ್ತೆ ಕೇಳುವವರೇ. ಮಾಡಿದ ಸಲಹೆಯನ್ನು ಮತ್ತೆ ಮತ್ತೆ ಮಾಡುವವರೇ.

ಕಿಟ್ಟುವಿನ ಕೈಗೆ ಡಿಗ್ರಿ ಬಂದ್ಮೇಲೆ ಆತ ಕಂಣಾಗೆ ಬೀಳುವುದೇ ಅಪರೂಪವಾಗುತ್ತಾ ಬಂದಿತು. ಜನಗಳಿಗೆ ಮೊಗ ತೋರಲು ಆತ ನಡುಗುತ್ತಿದ್ದ. ಮನೆ ಹಿತ್ತಲ ಗೋಡೆ ಹಾರಿ, ತೊರಗೇರಿ ಹಾದು ಊರಿಗೆ ಎರಡ್ಮೈಲು ದೂರದ ಕಾವೇರಿ ತಟದಲ್ಲಿ ಹೊಂಗೆಯ ಮರದಡಿಯಲ್ಲೋ, ತಪ್ಪಿದರೆ ಅದೇ ಹಾದಿಯಲ್ಲೇ ಕೋಟಿ ಹಿಂದಿನ ಬಯಲನ್ನು ದಾಟಿ, ಪಾಪಸ್ಕಿರೆ ಹಾದು ಮರಳೀಗುಡ್ಡವನ್ನು ಹತ್ತಿ ಯಾವುದಾದರೂ ಬಂಡೆಯ ಸಂದಿಯಲ್ಲಿ ಕುಳಿತು ದೂರದ ಕ್ಷಿತಿಜವನ್ನೇ ದಿಟ್ಟಿಸುತ್ತಾ ಅದೇನನ್ನೋ ಯೋಚಿಸುತ್ತಿರುವ.

" ಕಿಟ್ಟೂ,....ಭಾವನಿಗೆ ಬರೆದಿದ್ದೇನೆ. ನಿನ್ನ ಕೋಲಾರಕ್ಕೆ ಕಳಿಸ್ತೀನಿ. ಏನಾದರೂ ಕೆಲಸ ಕೊಡಿಸೂಂತ....“ಎಂದು ಬೆಳಗಾದರೆ ತಂದೆ ಶುರು ಮಾಡಿ ಬಿಡುತ್ತಿದ್ದರು.

ಇನ್ನು ಅಜ್ಜಿ ಮಾತು ಬೇರೆ. ಮನೆ ಜಗ್ಲಿಮೇಲೆ ಹಪ್ಪಳ ಬಿಸಲಿಗಿಟ್ಟು, ಕೋಲ್ನಲ್ಲಿ ಬಂದ ಹಸು ಕರುಗಳನ್ನು ಓಡಿಸ್ತಾ ಇರೋವಾಗ ಕಿಟ್ಟೂ ಚಿಂತೆ ಬರುತ್ತೆ ಆಕೆಗೆ. ಪಕ್ಕದ್ಮನೆ ಚಿದಂಬ್ರಾಚಾರಿ ಹೆಂಡತಿ ಕಣ್ಣಿಗೆ ಬಿದ್ದರೆ ಸಾಕು. ಹೃದಯದಲ್ಲಿ ಹುದುಗಿರೋದೆಲ್ಲಾ ಭುಗಿಲ್ಲೆಂದು ಹೊರ ಹೊಮ್ಮಿ ಬಿಡುತ್ತೆ. ಚಿದಂಬ್ರಾಚಾರಿನೂ, ಕಿಟ್ಟೂನೂ ಎಲಿಮೆಂಟರಿ ಶಾಲೆಯಲ್ಲಿ ಒಟ್ಟಿಗೆ ಓದಿದವ್ರು, ಎಲಿಮೆಂಟ್ರಿ ಮುಗಿಸೊದ್ರಲ್ಲೇ ಚಿದಂಬ್ರಾಚಾರಿ ಅಡಿಗಲ್ಲು, ಅಗ್ಗಿಷ್ಟಿಕೆ, ಅಪರಂಜಿ ಎನ್ನುತ್ತಾ ಅಪ್ಪನಿಗೆ ಅಸಿಸ್ಟ್ ಮಾಡಲು ತೊಡಗಿದವ್ನು, ಈಗ ಕಿಟ್ಟು ಡಿಗ್ರಿ ತಗೊಂಡು ಬರುವ ಹೊತ್ತಿಗೆ ಹೆಂಡ್ತಿ ಮೈತುಂಬ ಮಣಗಟ್ಟಲೆ ಭಂಗಾರ ಹಾಕಿ, ಅಜ್ಜಿ ಹತ್ರ ಸೈ ಅನ್ನಿಸ್ಕೊಂಡವ್ನು. ಊರಿನಲ್ಲಿ ಎಲ್ಲರಿಗಿಂತಲೂ ಅಜ್ಜಿಯನ್ನು ಕಂಡರೆ ಕಿಟ್ಟುವಿಗೆ ಬಲು ಅಂಜಿಕೆ. ಕಿಟ್ಟು ಮುಖ ಕಾಣೋಕಿಲ್ಲ “ಅಲ್ಲಾ, ಆಚಾರಿಯಾದ್ರೇನಂತೆ?....

ಅಪರಂಜಿ ಸಂಸಾರ ಸಾಗಿಸ್ತಾ ಇದಾನೆ ಚಿದಂಬ್ರು. ಡಿಗ್ರಿ-ಗಿಗ್ರಿ ಇಲ್ದೇ ಇದ್ರು ಅವನ ಮುಖದ ಕಳೆ ನೋಡ್ಬೇಕು" ಅಂತ ಶುರು ಮಾಡ್ಬಿಟ್ಟಿದ್ರು.

ಯಮರ್ಜೆನ್ಸಿ ಭಾರತಾನ ಕವಿಯುತ್ಲೇ, ಅದೇನೋ ಕಿಟ್ಟೂ ಮೊಗದಲ್ಲೇ ಒಂದು ತರಾ ಕಳೆ ಏರೋಕೆ ಶುರು ಆಯ್ತು. ಅನೇಕ ಸಲ ಆತ ಅಂಗ್ಡಿ ಬೀದೀಲಿ ಕಾಣಸಿಕ್ಕಿದ. ಊರ್ಮನೆಗಳಲ್ಲಿ ಒಲೆ ಉರಿಯೋದು ಅಪರೂಪ ಆದಂತೆಯೇ ಸುಬ್ಬಶ್ರೇಷ್ಠಿ, ಬ್ಯಸಾನಿ ಅಂಗ್ಡಿ ಉಪ್ಪು,ಉದ್ದು ಮೂಟೆಗಳು ಹಾಗೇ ಉಳಿದ್ವು. ಇನ್ನು ಅವರುಗಳಿಗೆ ಮೂಟೆ ಯೋಚ್ನೆಯಲ್ಲಿ ಕಿಟ್ಟುವಿನ ಕಡೆ ಲಕ್ಷ್ಯವೆಲ್ಲಿಯದು? ಇನ್ನು ಉಪಾಧ್ರುದು ಏನ್ ಲೆಕ್ಕ? ತಿಥಿ ತಿರುಮಂಜಲಗಳು ಎಂದೋ ನಿಂತ್ಬಿಟ್ವು. ಗಂಟ್ಲಲ್ಲಿ ಇಳಿಯೋಕೆ ಗಂಜಿ ಇಲ್ಲದ್ಮೇಲೆ ಗಂಜ್ಯದ್ಮಾತುಗಳು ನಿಂತು ಕೊಳ್ಳೇಗಾಲ ದ್ಹಾಳಿ ಪರಿಶುದ್ಧವಾಯಿತು.

ಒಂದು ದಿನ ನಡುರಾತ್ರಿಯಲ್ಲಿ ಅಗ್ಗಿಷ್ಟಿಕ್ಕೆ, ಅಡಿಗಲ್ಲು, ಅಪರಂಜಿ ಮೂಸೆ ಆದಿಗಳನ್ನು ತಿಪ್ಪೆಗೆಸೆದು ಹೆಂಡ್ತಿ ಸಮೇತ ಚಿದಂಬ್ರಾಚಾರಿ ಮರಳೀಗುಡ್ಡದಿಂದ ಕೆಳಕ್ಕೆ ಹಾರಿ ಸತ್ಮೇಲೆ. ಅಜ್ಜೀನೂ ಕಿಟ್ಟುವನ್ನು ಕಂಡೆತ್ತಿ ನೋಡುವುದನ್ನು ನಿಲ್ಲಸಿದ್ಲು.

ಇನ್ನು ಕೇಳ್ಬೇಕೆ ಕಿಟ್ಟೂನ? ದಿನೇ ದಿನೇ ಆತನ ಮುಖ ಕಳೆ ಏರ ತೊಡಗಿತು. ಹೊಂಗೆಮರ ಏರಿ, ಕಾವೇರಿಗೆ ಧುಮ್ಕಿಕ್ಕಿ ಬೆಳಗೆಲ್ಲಾ ಈಜಾಡಿ, ಊಟದ ವೇಳೆಗೆ ಮನೆಗೆ ಹಾರಾಡುತ್ತಾ ಬರುವನು. ಸಂಜೆ ಊರಿನ ಪೀಸ್ಪಾರ್ಕ್ ಲೈಬ್ರರಿಯಲ್ಲಿ ಬರೋ ಪೇಪರ್ನೆಲ್ಲಾ ಜಾಲಾಡುವನು. ಲೈಬ್ರರಿ ತುಂಬಾ ತುಂಬಿರೋ ಜೋಲು ಮುಖಗಳ ಬಾಯಲ್ಲಿ, ಕಿಟ್ಟುವಿನ ನಗುಮುಖ ಕಂಡಾಗೆಲ್ಲಾ ಜೊಲ್ಲು ಹರಿಯುವುದು.

ಹೀಗಿರೋದ್ರಲ್ಲಿ ಒಂದು ದಿನ ಬೆಳಿಗ್ಗೆ ಕಿಟ್ಟು ಇದ್ದಕ್ಕಿದ್ದಂತೆಯೇ ಅದೃಶ್ಯನಾದ ಕಾವೇರಿ ಶೋಧಿಸಿಯಾಯ್ತು ಮರಳೀ ಗುಡ್ಡವನ್ನು ಹತ್ತುಸಲ ಬಳಸಿಯಾಯ್ತು. ಎಲ್ಲೂ ಕಿಟ್ಟೂ ಮಾತ್ರ ಇಲ್ಲ.

ಒಂದು ದಿನ ಬೆಳಿಗ್ಗೆ, ಕಾವೇರಿ ದಡದಲ್ಲಿ ಹೊಂಗೆ ಮರದಡಿಯಲ್ಲಿ ಆತನನ್ನು ಕಂಡವರುಂಟು. ಸಂಜೆ ಪೀಸ್ಪಾರ್ಕ್ನಲ್ಲಿ ಬಹಳ ಹೊತ್ತು ಪತ್ರಿಕೆಗಳನ್ನು ತಿರುವುತ್ತಿದ್ದುದನ್ನು ನೋಡಿದವರುಂಟು. ಮರಳೀಗುಡ್ಡದಮೇಲೆ ಓಡಾಡುತ್ತಿದ್ದುದನ್ನು ಗಮನಿಸಿದವರುಂಟು.

ಆದರೂ ಬೆಳಗ್ಗೆ ಕಿಟ್ಟಿ ಪತ್ತೆ ಇಲ್ಲ. ಮನೇಲಿ ದಿಂಬಿನಡಿಯಲ್ಲಿ "ಧೈರ್ಯವಾಗಿರಿ" ಎಂದು ಬರೆದಿಟ್ಟು ಅದೆಲ್ಲೋ ಮಾಯ್ವಾಗ್ಬಿಟ್ಟಿದಾನೆ.

ಕಿಟ್ಟೂ ತಂದೆಗೆ, ಕಿಟ್ಟೂಗಿಂತ ಕಡಾಂಬೀದೆ ಚಿಂತೆ. ಕೋಲಾರದಲ್ಲಿದ್ದ ಅಳಿಯಮಯ್ಯ ಕಡಾಂಬೀ ಕೊರಳಿಗೆ ಕಿಟ್ಟೂನ ಕಟ್ಟೋಣಾಂತ ಯೋಚನೆ ಮಾಡಿದ್ರೆ ಅವ್ರು, ಕೋಲಾರದ ಕೆಲಸ ಖೋತ ಅನ್ನುತ್ತಾ ಮಾವನ್ಮನೇಗೆ ಸಂಸಾರ ಸಮೇತ ಬಂದಿಳಿಯೋದೆ ಕಡಾಂಬಿ? ಇನ್ನು ಮನೆ ಹೊಕ್ಕ ಅಳಿಯನ ಯೋಚನೆ ಯಲ್ಲಿ ಮನೆ ಬಿಟ್ಟಿರೋ ಮಗನ ಯೋಚನೆ ಹೇಗೆ ಬರಬೇಕು?

ಕಡಾಂಬಿ ಕೋಲಾರದಲ್ಲಿದ್ದಷ್ಟು ದಿನ್ನೂ ಭೂಮಿ ಒಳಗೆ ಇದ್ದವ್ನು. ಈಗ ಕೊಳ್ಳೇಗಾಲದ ಕಾವೇರಿ ನೀರು, ಹೊಂಗೇ ಮರದ ಗಾಳಿ, ಮಾವನ ಮನೆ ಊಟ ಮಾಡಿ ಕೊಬ್ಬಿದ ಗೂಳಿಯಾದ. ಪೀಸ್ಪಾರ್ಕ್‌ನಲ್ಲಿ ಪತ್ರಿಕೆಗಳನ್ನು ತಿರುವಿ ಲೋಕದ ಸುದ್ದಿಗಳನ್ನು ಸುತ್ತಮುತ್ತಲಿನವರೊಡನೆ ತರ್ಕಿಸುತ್ತಾ ಮರಳೀಗುಡ್ಡದ ಮೇಲೆ ಕುಳಿತುಬಿಟ್ಟನೆಂದರೆ ಮನೆಗೆ ಮರಳುವುದು ರಾತ್ರಿ ಊಟಕ್ಕೇನೇ, ಒಳ್ಳೇ ಸಹ ವಾಸವೂ ದೊರೆಯಿತು — ಕಾಂಗ್ರೆಸ್ ಟಿಕಿಟ್ ಕೊಟ್ಟಿರಲಿಲ್ಲ ಬಸಾರಿಗೆ; ಜನ ಓಟ್ಹಾಕಿರಲಿಲ್ಲ ದಮಾಸೆಯವರಿಗೆ. ಇನ್ನುಳಿದ ಅವನ ಹೊಸ ಸಂಗಡಿಗರಿಗೆ ಬೇರೆ ಕೆಲಸ ಇರಲಿಲ್ಲ ಸರಿ—ಕ್ರಾಂತಿಗೆ ಬೇಕಾದ ಸಕಲ ಕಾರಣಗಳೂ ಆಯಿತಲ್ಲ? "ಮೊರಾರ್ಜಿ ಮಾರೋ ಗೋಲಿ" ಎಂದು ಒಂದು ದಿನ ಮುಂಬೆಳಗು ಕಡಾಂಬಿ ಹಾಕಿದ ಬೊಬ್ಬೆಗೆ ಮಿಕ್ಕವರೂ ಧ್ವನಿ ಜೋಡಿಸಿದರು. ಇಲ್ಲಪಲ್ಲದ ಕತೆಗಳನ್ನು ಕಟ್ಟಿದರು. ಸತ್ತ ಚಿದಂಬರುವಿನ ಹೆಸರನ್ನು ಮತ್ತೆ ಎತ್ತಿದರು. ಪತ್ರಿಕೆಗಳ ಕಾಲಮುಗಳಲ್ಲಿ ಕೊಳ್ಳೇಗಾಲದ ಸುದ್ದಿಗಳನ್ನು ತುಂಬಿಸಿದರು. ಮೊರಾರ್ಜಿ ವಿಕ್ಟಿಂಗಳ ಪಟ್ಟಿಯಲ್ಲಿ ಮಾಯವಾದ ಕಿಟ್ಟುವನ್ನೂ ಸೇರಿಸಿಬಿಟ್ಟರು.

* * * *

ಮಾತನಾಡಿಸಿದ ವ್ಯಕ್ತಿ ಕಿಟ್ಟು ಎಂದು ಗೊತ್ತಾದುದು ಸ್ವಲ್ಪ ಹೊತ್ತಾದ ಮೇಲೆಯೇ. ಟೆರಿಲೀನ್ ಷರಟು, ಪಾಲೀಷ್ ಹೊಡೆದ ಬೂಟು, ಮಿರ ಮಿರನೆ ಕಳೆಯಿಂದ ಮಿನುಗುತ್ತಿರುವ ಮುಖ. ಕೊಳ್ಳೇಗಾಲದ ಹೊಂಗೇಮರದ ಕಿಟ್ಟುವೆಲ್ಲಿ? ಗಾಂಧೀ ಬಜಾರದಲ್ಲಿ ಪ್ರತ್ಯಕ್ಷನಾಗಿರುವ ಈ ಕಿಟ್ಟುವೆಲ್ಲಿ!!

"ಕಿಟ್ಟೂ, ಎಲ್ಲಿ ಮಾಯ್ವಾಗಿದ್ಯೋ? ಇದೇನೀ ಅವತಾರ?..."

"ಯಾವಾಗ್ಬಂದೆ ಊರಿಂದ? ಸ್ವಲ್ಪ ಅರ್ಜೆಂಟ್ ಕೆಲ್ಸ ಇದೆ. ಟೈಲರ್ ಹತ್ರ ಹೋಗ್ಬೇಕು. ನೀನೂ ಬಾ ಜೊತೇನೇ"

"ಟೈಲರ್ರು? ಇನ್ನೇನಾದ್ರೂ ಸೂಟುಗೀಟು?...."

"ಸೂಟೂ ಇಲ್ಲ.. ಗೀಟೂ ಇಲ್ಲ. ಕರೀ ಬಾವುಟಗಳನ್ನು ಹೊಲಿಯುಕ್ಕೆ ಹಾಕಿದೀನಿ. ಅಂದ್ಹಾಗೆ ಊರಲ್ಲಿ ಭಾವಂದು ತೀರ ಗಲಾಟೆಯಂತೆ! ಪೇಪರ್ನಲ್ಲಿ ಅವನ ಭಾಷಣಗಳನ್ನ ಓದ್ತಿದ್ರೆ ರಕ್ತ ಕುದಿಯುತ್ತೆ."

"ಹೌದೋ ಕಿಟ್ಟೂ. ನಿಸ್ವಾಭಾವ ಅಷ್ಟೊಳ್ಳೆ, ವಾಗ್ಮೀಂತ ಗೊತ್ತಿರಲಿಲ್ಲಪ್ಪ. ಗೋಲ್ಡ್ ಕಂಟ್ರೋಲ್ ಮೇಲೆ ಅವ ಮಾತಾಡ್ತಿದ್ರೇ....ಅಬ್ಬ! ಮಲಗಿದ್ದ ಜನಾನ ಹುರಿದುಂಬಿಸ್ತಾ ಇದಾನಯ್ಯ ಕಡಾಂಬಿ."

"Shut up! .. ಅವ್ನ ಊರ್ಬಿಡ್ಸಿ ಓಡಿಸ್ದೇ ಹಾಗೇ ಬಿಟ್ಟಿದೀರಲ್ಲ. ಊರ್ ಜನ್ಗಳ್ಗೆಲ್ಲಾ ಮಾಟ ಮಾಡ್ತಾ ಇದಾನೆ. ಪಾಪ ಮೊರಾರ್ಜಿ...."

ಅಂ!....ಏನ್ನಿಟ್ಟು?....ಅದೇನ್ಹೇಳ್ದೆ."

ಅಷ್ಟರಲ್ಲಿ ಟೈಲರ್ ಅಂಗಡಿ ಬಂತು. ಕಿಟ್ಟು ಒಂದ್ಯಂತೆ ಕಪ್ಪು ಬಾವುಟ ಗಳನ್ನು ಹೊತ್ತುಕೊಂಡು ಹೊರಬಂದ.

"ನಾಳೆ ಸೋವಾರ ಮರಳಿಗುಡ್ಡದ ಮುಂದಿನ ಬಯಲಲ್ಲಿ ಸಭೆಯಂತೆ? ....ಕೊಳ್ಳೇಗಾಲದ ತಾಲ್ಲೂಕೆಲ್ಲಾ ಷಾಮಿಲ್ಲಾಗುತ್ತಂತೆ? ಭಾವಂದೇ ಭಾಷಣವಂತೆ? ಮೊರಾರ್ಜಿ ಫೋಟೋನ್ನ ಬಸಾರಿ ಸುಡ್ತಾನಂತೆ?....ದಮಾಸೇದೆ ಅಧ್ಯಕ್ಷತೆಯಂತೆ?

ಕಿಟ್ಟುವಿನ ವಾಣಿ ಕಟುವಾಗಿದ್ದಿತು. ಕಣ್ಣು ಕಿಡಿ ಕಾರುತ್ತಿತ್ತು. ಇದೇನಾ ಗಿದೆ ಕಿಟ್ಟುವಿಗೆ? ಊರೆಲ್ಲಾ ಮೊರಾರ್ಜಿಗೆ ಮಾರೋ ಗೋಲಿ ಅಂತಿದ್ರೆ, ಈತ ಇದೇನು ಅನ್ನುತ್ತಿದಾನೆ? ಮೊರಾರ್ಜಿಯು ಯಾವ ಮೋಡಿಗೆ ಈಗ ಸಿಲುಕಿದ್ದಾನೆ?

"....ನಡೀಲಿ. ನಡೀಲಿ. ಅದ್ಹೇಗೆ ನಡೆಸ್ತಾರೆ ಸಭೆಯನ್ನ ನೋಡ್ತೀನಿ. ಸಾವಿರ್ಜನದಕ್ಕೆಲಿ, ಕರೀ ಬಾವುಟ ಎತ್ತಿಸ್ತೇನೆ. ಭಾಷಣ ಮಾಡೋ ಕಡಾಂಬಿಗೆ ಕಲ್ ಹೊಡೆಸ್ತೀನಿ...."

ಹಾಗೆಯೇ ಮಾತನಾಡುತ್ತಾ ಹಾರ್ಡಿಂಜ್ ರೋಡಿಗೆ ಬಂದೆವು. ಒಂದು ಸುಂದರ ಸದನದ ಮುಂದೆ ಕಿಟ್ಟು ನಿಂತ. ಮನೆಯ ಹೊರಗೆ "ಕೊಳ್ಳೇಗಾಲದ ಕಿಟ್ಟನ್" ಎಂಬ ಹೆಸರು ಹಲಗೆ ನೇತಾಡುತ್ತಿತ್ತು. ಮನೆಯೊಳಕ್ಕೆ ಅಡಿ ಇಟ್ಟಾಗ ಹಾಲಿನಲ್ಲಿ ಹಾರದೊಡನೆ ಶೋಭಿಸುತ್ತಿರುವ ದೊಡ್ಡ ಸೈಜಿನ ಮೊರಾರ್ಜಿ ಫೋಟೋ ಅಡಿಯಲ್ಲಿ, ಒಂದು ದೊಡ್ಡ ಅಲಮೇರಿನಲ್ಲಿ—ಅಗ್ಗಿಷ್ಟಿಕೆ!, ಅಡಿಗಲ್ಲು!, ಅಪರಂಜಿ!

"ಅದರಲ್ಲೇನು ವಿಶೇಷ ಇಲ್ಲ ರಾಮೂ. ಕುರ್ಚಿ ಮೇಲೆ ಕೂರು. ಕತೆಯೆಲ್ಲಾ ಕೇಳೋವಿಯಂತೆ" ಎಂದು ಕಿಟ್ಟಿ ಅಂದಾಗಲೇ ನಾನೀ ಲೋಕಕ್ಕೆ ಬಂದದ್ದು.

"....ವೈಯುಕ್ತಿಕವಾಗಿ ಹೇಳೋದಾದ್ರೆ ನಾನು ಮೊರಾರ್ಜೀಗೆ ಆಜೀವ ಪರ್ಯಂತ ಅಭಾರಿಯಾಗಿದ್ದೇನೆ ಕೊಳ್ಳೇಗಾಲದ ಬೀದಿಗಳಲ್ಲಿ ತಲೆ ಎತ್ತಿ ನಡೆಯುವಂತೆ ಮಾಡಿದ ಮಹಾಮಹಿಮ ಅವನೇ."

ನನ್ನ ಕತೆ ಯಮರ್ಜೆನ್ಸಿಯಿಂದ ಶುರು ಆಗುತ್ತೆ. ಚಿದಂಬ್ರು ಅಗ್ಗಿಷ್ಟಿಕೆ, ಅಡಿಗಲ್ಲುಗಳನ್ನು ತಿಪ್ಪೆಗೆಸೆದು ಮರಳೀಗುಡ್ಡದಿಂದ ಹೆಂಡ್ತೀ ಜೊತೆ ಬಿದ್ದು ಸತ್ತನಲ್ಲ? ಆತ ನನ್ನ ಎಲಿಮೆಂಟರಿ ಶಾಲೆಯ ಸಂಗಡಿಗ. ಪಕ್ಕದ ಮನೇವ್ನು ಬೇರೆ. ಅಜ್ಜಿಯಿಂದ ಆತನ್ಮೇಲೆ ನನಗೆ ಇಲ್ಲದ ದ್ವೇಷ ಬಂದಿತ್ತು. ಆದರೆ ಆತ ಆತ್ಮಹತ್ಯೆ ಮಾಡ್ಕೊಂಡ್ಮೇಲೆ, ಮರಳೀಗುಡ್ಡದ್ಮೇಲೆ ಕುಳಿತಾಗಲೆಲ್ಲಾ ಅವ್ನ ಯೋಚ್ನೆಯೇ ಬರ್ತಾ ಇತ್ತು.

ಯಮರ್ಜೆನ್ಸಿ ಹವೆ ಏರ್ತಾ ಇದ್ದಾಗೇನೇ ಪತ್ರಿಕೆಗಳಲ್ಲಿ ದಿನಕ್ಕೊಬ್ಬ ಆಚಾರಿಯ ಆತ್ಮಹತ್ಯೆಯ ಸುದ್ದಿ ಬರ್ತಾ ಇರೋದು.

ನಾನ್ಮೊದಲೇ ಹೇಳಿದೆನಲ್ಲಾ....ಮೊರಾರ್ಜಿ ಮೇಲೆ ಒಂದು ವಿಧವಾದ ಭಕ್ತಿ ಬಂದ್ಬಿಟ್ಟಿತ್ತೂಂತ!—ಪ್ರತಿ ದಿನ ಪೇಪರ್ನಲ್ಲಿ ಆತನ ಭಾಷಣ ತಪ್ಪದೆ ಓದ್ತಾ ಇದ್ದೆ.

ಒಂದು ದಿನ .. ನನ್ನ ಜೀವನದಲ್ಲಿ ಚಿರಸ್ಮರಣೀಯವಾದ ದಿನ. ಮೊರಾರ್ಜಿ ಭಾಷಣ ಓದಿ, ಮರಳೀ ಗುಡ್ಡದ್ಮೇಲೆ ಕುಳಿತು ಚಿದಂಬರುವನ್ನು ನೆನೆದಾಗ ಇದ್ದಕ್ಕಿದ್ದಂತೆಯೇ ಹೊಳೀತು—

ಸರಸರನೆ ಮರಳೀಗುಡ್ಡದಿಂದ ಇಳಿದವ್ನು ಮನೆಗೆ ಮರಳಿ, ಹಿತ್ತಲ ಗೋಡೆ ಏರಿ, ಚಿದಂಬ್ರು ಮನೆ ಹಿತ್ತಲಿಗೆ ಧುಮಿಕಿ, ತಿಪ್ಪೆಯೊಳಗೆ ಚಿದಂಬ್ರು ಎಸೆದಿದ್ದ, ಹಾಗೇ ಅಲ್ಲಿ ಬಿದ್ದಿದ ಅಗ್ಗಿಷ್ಟಿಕೆ, ಅಡಿಗಲ್ಲು, ಮೂಸೆಗಳನ್ನು ಎತ್ತಿ ಗೋಣೀ ಚೀಲ್ದಲ್ಲಿ ಹಾಕ್ಕೊಂಡವ್ನೇ, ಬೆಳಗ್ಗಿನ ಬಸ್ಸಿನಲ್ಲಿ ಬೆಂಗ್ಳೂರಿಗೆ ಬಂದೆ. ಅಲ್ಲಿಗೆ ಮುಗೀತು ಕತೆ.

ಬೆಂಗ್ಳೂರಲ್ಲಿ ಬಸ್ಸಿಂದಿಳ್ದವ್ನೇ ನೇರ ಗೋಣೀ ಚೀಲದೊಡನೆ ಮಿನಿಸ್ಟ್ರು ಮನೆಗೆ ಹೋದೆ. ಅದೇ ದಿನ ತಿಂಗ್ಳಿಗೆ ನೂರು ರೂಪಾಯಿನ ಕೆಲ್ಸ ಸಿಕ್ತು. ಆದ್ರೆ ಕಾರ್ಖಾನೆ ಕೆಲಸ. ಕೆಲ್ಸ ಇಲ್ಲದ ಅಕ್ಕಸಾಲಿಗರಿಗೇಂತ ಮೊರಾರ್ಜಿ ಮಾಡಿಸಿದ್ದು. ಕಬ್ಬಿಣ ಉಜ್ಜೀ ಉಜ್ಜೀ ಕೈ ನೋಯ್ತು. ಅದನ್ನೂ ಬಿಟ್ಟೆ....ಒಂದು ಸಂಘ ಶುರು ಮಾಡ್ದೆ. ನಿರುದ್ಯೋಗಿಗಳಿಗೆ ಕೆಲ್ಸ ಖಾತ್ರಿ ಕೊಡಸ್ತೀನೀಂತ ಪ್ರಚಾರ ಮಾಡ್ದೆ. ಸ್ವಲ್ಪ ದಿನ " ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ತರಾನೇ. ಕೆಲ್ಸಕ್ಕೆ ಬಾರದ ಸಂಘಾಂತ ಜನ ಸುಮ್ನಿದ್ರು. ಆ ಮೇಲೆ ನನ್ ಸಂಘದ ಬೆಲೆ ಗೊತ್ತಾಯ್ತು ಅನ್ನು.

ಇಲ್ಲೀವರೆಗೆ ಮೂರ್ಸಾವಿರ ಜನ ನಿರುದ್ಯೋಗಿಗಳಿಗೆ ಉದ್ಯೋಗ ದಕ್ಕಿಸಿ, ಮೊರಾರ್ಜಿ ಹೆಸ್ರು, ನನ್ ಹೆಸ್ರ ಹೇಳಿ ದೀಪ ಹಚ್ಕೊವಂತೆ ಮಾಡಿದ್ದೇನೆ."

"ಅಂದ್ರೆ !?"

ಅರ್ಥವಾಗ್ಲಿಲ್ವೇ ! ನೋಡು, ಗೋಲ್ಡ್ ಕಂಟ್ರೋಲ್ ಆದ್ಮೇಲೆ ದಿನಕ್ಕೆ ಒಂದೊಂದು ಪೇಪರ್ನಲ್ಲೂ ಹತ್ತತ್ತು ಅಕ್ಕಸಾಲಿಗರ ಆತ್ಮಹತ್ಯೆ ವರದಿಯಾಗುತ್ತಾ ಇತ್ತು. ಅಂದ್ಮೇಲೆ, ಮೊರಾರ್ಜಿ ಆಚಾರಿಗಳಿಗೆ ಪರಿಹಾರ ವಿಚಾರ ಪ್ರಕಟಿಸುವ ಹೊತ್ತಿಗೆ, ನೂರಕ್ಕೆ ತೊಂಬತ್ತು ಅಕ್ಕಸಾಲಿಗರಾದರೂ ಫಿನ ಆಗಿರಲೇಬೇಕು ! ಆದ್ದರಿಂದ ಉದ್ಯೋಗಕ್ಕೆ ಯಾರು ನುಗ್ಗಬೇಕು ?"

"ನನ್ ಸಂಘಕ್ಕೆ ನೂರು ರೂಪಾಯಿ ಕೊಟ್ಟು ಸದಸ್ಯನಾದರೆ, ಒಂದ್ವಾರ ದೊಳಗೆ ಯಾವುದಾದರೂ ಫ್ಯಾಕ್ಟರಿಗೆ ನುಗ್ಗೋ ಗ್ಯಾರಂಟಿ ಕೊಡ್ತೀನಿ ಊರಿಗೆ ಬರೋಣಾಂತಿದ್ದೆ. ಬಿಡುವೇ ಇಲ್ಲ. ನಂಗೂ ಒಬ್ಬ ಸಹಾಯಕ್ಕೆ ಬೇಕು ನಿಂಗೂ ಏನೂ ಕೆಲಸ ಇಲ್ಲ. ನನ್ ಸೆಕ್ರೆಟರಿ ಆಗಿರು. ತಿಂಗಳಿಗೆ ನಾನೂರೂ, ಬಿಟ್ಟಿ ಬೋರ್ಡಿಂಗ್ ಲಾಡ್ಜಿಂಗ್ ಇದೇ ಹಾರ್ಡಿಂಜ್ ರೋಡ್ನಲ್ಲೇ ..."

* * * *

ಸೋಮವಾರ ಕೊಳ್ಳೇಗಾಳಕ್ಕೆ ಸಾವಿರ ಜನ ಹೋಗ್ತೇವೆ. ಮರಳೀಗುಡ್ಡದ ಸಭೆಯಲ್ಲಿ ಕಪ್ಪು ಬಾವುಟ ಹಿಡೀತೇವೆ. ಕಡಾಂಬೀಗೆ ಕಲ್ಲೆಸೀತೇವೆ, ದಮಾಸ್ ಇಲ್ಲಾನ್ನಿಸ್ತೇವೆ. ಬಸಾರೀನೂ ಬಿಡೋದಿಲ್ಲ

ಮೊರಾರ್ಜೀ ಭಾಯೀ ಜಿಯೋ !!!"

—ಕೊಳ್ಳೇಗಾಲದ್ವಾಮಾನುಜ

"ಬಲು ಜರೂರಾಗಿ ಕಾಫಿ ತೊಗೊಂಡು ಬಾ" ಅಂತ ವಿಧಾನಸೌಧದಲ್ಲಿ ಮಧ್ಯಾಹ್ನ ೧೨ ಗಂಟೆಗೆ ಹುಕುಂ ಹೊರಡಿಸಿದರೆ, 'ಸಂಜೆ ಮುಂದೆ ನಾಲ್ಕು ಗಂಟೆ ಹೊತ್ತಿಗೆ ತಂದೇಬಿಟ್ಟನಂತೆ, ಮಾಣಿ

—ವಾತಾವರಣ !

* * * *

ಮುಂಬಯಿನ ಪೌರಸಭೆಯಲ್ಲಿ ಸದಸ್ಯರು ಹೊಡೆದಾಟಕ್ಕೆ ಶುರುಮಾಡಿದ್ದ ರಂರಂತೆ—ಪುಣ್ಯ ! ಜಾಡಮಾಲಿಗಳು ಸಂಪು ಹೂಡಿದ್ದರು. ಇಲ್ಲದೇ ಇದ್ದರೆ ಅವರು ಗಳೂ ಈ ಹೊಡೆದಾಟದಲ್ಲಿ ಸೇರಿಬಿಟ್ಟಿದ್ದರೆ ಕಾಳಗವೇ ಆಗಿಬಿಡ್ತಿತ್ತು. !!

ಅವರನ್ನು ನೋಡಿಕೊಳ್ಳಿ!

ಆ ದಿನ ಹಸ್ತಿನಾಪುರದ ಅರಮನೆಯಲ್ಲಿ ಗುಜುಗುಜು ಅಂದರೆ ಗುಜುಗುಜು. ಹೊಲಮನೆ ಹೊರಗಿನ ವರಾಂಡದಲ್ಲಿ ಅರಸು ಧೃತರಾಷ್ಟ್ರನು ಪಹರೆ ನಡೆಯುತ್ತಿದ್ದ. ಕೈಗೋಲಿನ ನೆರವಿನಿಂದ. "ಪಾಪ! ನನ್ನಿಂದಾಗಿ ಗಾಂಧಾರಿದೇವಿ ಎಷ್ಟು ಬೇನೆ ಪಡ್ತಿದ್ದಾಳೋ, ಎಂತಹ ನೋವು ಅನುಭವಿಸ್ತಾ ಇದ್ದಾಳೊ ಅವಳಿಗೆ ಪರಿಹಾರ ಎಷ್ಟು ಹೊತ್ತಿಗೆ ದೇವರು ಕರುಣಿಸುತ್ತಾನೋ" ಎಂದೆಲ್ಲಾ ಯೋಚಿಸುತ್ತ, ಶತಪಥ ಸುತ್ತುತ್ತಿದ್ದ.

ಹೊಲೆಮನೆಯಲ್ಲಿ "ಅಯ್ಯಯ್ಯಮ್ಮಾ! ಕಣ್ಣು ಕಟ್ಟಿಕೊಂಡು ಇಂಥಾ ಕಷ್ಟಕ್ಕೆ ಸಿಕ್ಕಿ ಬಿದ್ದೆನಲ್ಲಮ್ಮಾ! ನೀನಾರು ಹೇಳಬಾರದಾಗಿತ್ತೇನಮ್ಮ! ಎಂಥ ಅಮ್ಮನೇ ನೀನು!" ಅಂತ ಎಂದೋ ಸತ್ತ ತಾಯಿಯನ ಜ್ಞಾಪಿಸಿಕೊಂಡು ಗಾಂಧಾರಿದೇವಿ ವದ್ದಾಡ್ತಾ ಇದ್ದಳು. ಸೂಲಗಿತ್ತಿಯರ ತಂಡವೇ ಶುಶ್ರೂಷೆಗೆ ನೆರವಾಗಿತ್ತು. "ಇನ್ನೇನಮ್ಮಾ ರತ್ನದಂತಹ ಗಂಡು ಹೆರ್ತೀಮ್ಮಾ ಅದಕ್ಕೇ ಸ್ವಲ್ಪ ಬೇನೆ ಹೆಚ್ಚು." ಎಂದು ಒಬ್ಬಾಕೆ ಸಮಾಧಾನ ಹೇಳಿದಳು. "ಸ್ವಲ್ಪ ಇರೀಮ್ಮಾ! ಹೊಕ್ಕಳಿಗೆ ಪಟ್ಟು ಹಚ್ತೀನಿ, ಬೇಗ ಹೆರಿಗೆ ಆಗುತ್ತೆ" ಎಂದು ಇನ್ನೊಬ್ಬಾಕೆ ಮದ್ದು ಲೇಪಿಸಿದಳು.

ಕಡೆಗೂ ಹೆರಿಗೆ ಆಯಿತು." ಒಂದಾಯ್ತು, ಎರಡಾಯ್ತು, ಮೂರಾಯ್ತು ಆದ ಅವಸರದಲ್ಲಿ ಸೂಲಗಿತ್ತಿಯರು ಲೆಕ್ಕ ಇಡುಕ್ಕೇ ಆಗಲಿಲ್ಲ. ಎಲ್ಲಾ ಹೆತ್ತಾದಮೇಲೆ ಸುಸ್ತಾದ ಬಾಣಂತೀಗೆ ಕಸ್ತೂರಿ ತಿನ್ನಿಸಿ ಕಂಬಳಿ ಹೊದ್ದಿಸಿ ಮಲಗಿಸಿದರು. ಬೇಗ ಬೇಗ ಮೊರ ತರಿಸಿ ಬೂದಿ ಉದುರಿಸಿ ಬಟ್ಟೆಹಾಕಿ ಒಂದೊಂದು ಮಗುವನ್ನೂ ಒಂದೊಂದು ಮರದಲ್ಲಿ ಮಲಗಿಸಿ. ಆಮೇಲೆ ಖಾನೇಷುಮಾರಿ ತೆಗೆದುಕೊಂಡರು. ಒಂದು ನೂರು ಮಕ್ಕಳು! ಹೆತ್ತ ಹೊಟ್ಟೆ ತಣ್ಣಗಿರಲಮ್ಮ ಎಂದು ಸೂಲಗಿತ್ತಿಯರೆಲ್ಲ ಹರಸಿದರು.

ಅಷ್ಟು ಹೊತ್ತಿಗೆ ಗಾಂಧಾರಿ ಎಚ್ಚೆತ್ತಿದ್ದಳು. "ಎಂಥದೇ ಮಗು! ಕೈಕಾಲೆಲ್ಲ ಸರಿಯಾಗಿದೆಯೇನೆ" ಎಂದು ಕೇಳಿದಳು. ಮೊದಲನೇದು ಗಂಡು. ಎರಡನೇದೂ ಹಾಗೆ ಅಂತ ಶುರು ಮಾಡಿದಳು, ಶೂಲಗಿತ್ತಿ. "ಒಟ್ಟು ಎಷ್ಟೋ ಹಾಗಾದರೆ?" ಎಂದು ಕಾತುರದಿಂದ ಗಾಂಧಾರಿ ಕೇಳಿದಳು. "ನೂರು" ಅಂತ ಸೂಲಗಿತ್ತಿ ಹೇಳಿದಾಗ, ಗಾಂಧಾರಿ.

"ಅಯ್ಯಯ್ಯೋ! ಹೊರಗಡೆ ಅವರು ಇದಾರೆ ಅಂತ ಕಾಣುತ್ತೆ. ಅವರ ಕಾವಲು ಕಾಯ್ರಿ! ಎಲ್ಲಾರ ಕಣ್ಣು ಕಾಣದೆ ಓಡಿಹೋಗಿ ಕೆರೆಗಿರೆಗೆ ಬಿದ್ದು ಪ್ರಾಣ ಕಳಕೊಂಡಾರು?" ಅಂತ ಚೀರಿದಳಂತೆ.

ಯಾಕೋ ಭಯವಾಗುತ್ತೇಂದ್ರೆ....

ಅಜ್ಜ ಕಥೆ ಹೇಳ್ತಾಯಿದ್ದ—

ಒಂದೂರಲ್ಲಿ ಒಂದು ತೋಟದ ಮಾಲಿ ಇದ್ದನಂತೆ. ಅವನು ಮಾಲಿ ಕೆಲಸದಲ್ಲಿ ಬಹಳ ಪರಿಣತಿ ಹೊಂದಿದ್ದನಂತೆ. ತನ್ನ ತೋಟಾನ ಅವನು ತನ್ನ ಹೃದಯಕ್ಕಿಂತಲೂ ಹೆಚ್ಚು ಪ್ರೀತಿಸುತ್ತಿದ್ದನಂತೆ. ತೋಟದ ಗಿಡಮರಗಳೂ ಸಹ ಅವನನ್ನು ಪ್ರೀತಿಸುತ್ತಿದ್ದುವಂತೆ. ಹೀಗೆ ಇರುವಾಗ ಮಾಲಿಗೆ ತೀರ್ಥಯಾತ್ರೆ ಮಾಡಬೇಕೂಂತ ಬಹಳ ಆಸೆ ಆಯ್ತಂತೆ. ಆದ್ರೆ ಹೋಗೋದ್ಹ್ಯಾಗೆ ಎಂದು ಬುಳು ಬುಳು ಅಂತ ಅಳಲಿಕ್ಕೆ ಶುರುಮಾಡಿದನಂತೆ. ಮರದ ಮೇಲಿದ್ದ ಕೋತಿಗಳೆಲ್ಲಾ ಹೇನು ಕುಕ್ಕೋದನ್ನ ನಿಲ್ಲಿಸಿ, ಪಿಳಿಪಿಳಿ ಅಂತ ಬಗ್ಗಿ ನೋಡ್ದವಂತೆ. ಆ ಮೇಲೆ ಒಂದೊಂದಾಗಿ ಕೆಳಗಿಳಿದು ಬಂದು ಮಾಲೀನ ಕೇಳಿದವಂತೆ, "ಮಾಲಿಯಣ್ಣ, ಮಾಲಿಯಣ್ಣ, ಯಾಕಳ್ತೀ? ಮಾಲಿ ಮೂಗೊರಸುತ್ತಾ ಹೇಳಿದನಂತೆ. "ಕೋತ್ತಮ್ಮಗಳಿರಾ, ತೀರ್ಥಯಾತ್ರೆ ಮಾಡ್ಬೇಕಂತ ಆಸೆ ಹುಟ್ಬಿಟ್ಟಿದೆ. ಟೂರಿಸ್ಟ್ ಬಸ್ಸೂ ರೆಡಿಯಾಗ್ತೈತೆ. ಆದರೆ ನಾ ಬಿಟ್ಟುಹೋದ್ರೆ ಈ ನನ್ನ ಕಂದಮ್ಮಗಳನ್ನ, ಈ ಗಿಡಮರಗಳನ್ನ ಯಾರು ನೋಡ್ಕೊತಾರೇ ೯ ..." ಅಂತ ಮತ್ತೆ "ಹೋ" ಎಂದು ಅಳಲಿಕ್ಕೆ ಪ್ರಾರಂಭಿಸಿದನಂತೆ.

ಆಗೊಂದು ಗಡವಾ ಕೋತಿ, ಕೆಂಪು ಮೋರೆಯದು ಬಂದು ಹೇಳ್ತಂತೆ, "ನಾವಿರೂವಾಗ ನಿನಗ್ಯಾತರ ಯೋಚ್ನೆ? ನಿಶ್ಶಂಕೆಯಿಂದ ನೀನು ತೀರ್ಥಯಾತ್ರೆ ಮುಗೀಸ್ಕೊಂಡು ಬಾ ನಿನ್ನ ಗಿಡಮರಗಳನ್ನ ನಾವು ನೊಡ್ಕೋತೇವೆ.

ಮಾಲಿ ಆನಂದದಿಂಡ ಒಪ್ಕೊಂಡು "ಕೋತ್ತಮ್ಮಗಳಿರಾ, ಹಾಗಾದರೆ ನಾ ಹೊರಡುತ್ತೇನೆ. ನನ್ನ ಗಿಡಗಳಿಗೆ ಹೆಚ್ಚು ಕಡಿಮೆ ನೀರು ಹಾಕಬೇಡಿ ಯಾವ್ಯಾವ ಗಿಡಗಳಿಗೆ ಎಷ್ಟೆಷ್ಟು ನೀರು ಬೇಕೋ ನೋಡಿ ಹಾಕಿ, ನಾ ಬರ್ತೇನೆ. ಗುಡ್ ಬೈ" ಎಂದು ಹೊರಟ ತೀರ್ಥಯಾತ್ರೆಗೆ.

ಗಡವ ಕೋತಿ ನೀರು ಹುಯ್ಯುವ ತಂಡಕ್ಕೆ ನಾಯಕನಾಯ್ತು. "ಲ್ರೋ, ನಾ ಹೇಳೋಹಂಗೆ ಕೇಳಿ. ಹೆಚ್ಚು ಕಡಿಮೆ ನೀರು ಹುಯ್ಯಬೇಡಿ. ಗಿಡ ಕಿತ್ತು ನೋಡಿ. ಬುಡ ದಪ್ಪಕಿದ್ದರೆ ಹೆಚ್ಚು ನೀರು ಹಾಕಿ; ತೆಳ್ಳಗಿದ್ದರೆ ಕಮ್ಮಿ ನೀರು. ಗೊತ್ತಾಯ್ತೇ, ಹೂಂ ಹೊರಡಿ. ಒನ್, ಟೂ, ತ್ರೀ."

ಮಾಲಿ ತಿಂಗಳಾದ ಮೇಲೆ ಬಂದು ಲಬೋ ಲಬೋ ಅಂತ ಹೊಡಕೊಂಡನಂತೆ. ಕೋತ್ತಮ್ಮಗಳು ಮರಹತ್ತಿ "ಇವ ಯಾಕೆ ಹೀಗೆ ಬಡ್ಕೋತಾನೆ" ಅಂತ ಪಿಳಿಪಿಳಿ ನೋಡ್ದವಂತೆ.

ಅಜ್ಜ ಆಕಳಿಸಿದ. ಸ್ವೆಟರ್ ಹಾಕುತ್ತಿದ್ದ ಅಜ್ಜಿ ಬಿಕ್ಕಿದಳು.

"ಯಾಕೋ ಭಯವಾಗುತ್ತೇಂದ್ರೆ ನಿಮ್ಕತೆ ಕೇಳಿ."

"ಅಂತದೇನೇ ಇದೆ. ಭಯವಾಗೋಕೆ ಅದರಲ್ಲಿ?"

"ಅಲ್ಲ, ಜನ ನೆಹ್ರೂನ ರಾಜೀನಾಮೆ ಕೊಡಿ, ಕೊಡಿ. ನಿಮ್ಮ ಕೆಲ್ಸ ನಾವು ನೋಡ್ಕೋತೇವೆ ಅಂತಾಯಿದಾರಲ್ಲಾ. ನಿಮ್ಕತೆ ಕೇಳಿ ಭಯವಾಗ್ತಾಯಿದೇಂದ್ರೆ" ಅಜ್ಜಿ ಮತ್ತೆ ಬಿಕ್ಕಿದಳು.

—ಶ್ರೀಮತಿ ಎನ್. ಶ್ರೀಧರನ್.

ನಮ್ಮ ಸೋಲ್ ಏಜನ್ಸಿ ಪ್ರಕಟಣೆಗಳು

ಕಾದಂಬರಿಗಳು

ಬಾಳಮುಂಜಾವು	ಎಂ. ಕೆ. ಜಯಲಕ್ಷ್ಮಿ	2-00
ಬಾಳಿನ ಪಥ	,,	2-00
ಅಡವಿಯ ಹುಡುಗಿ	ಬಿ ವೆಂಕಟಾಚಾರ್ಯ	1-50
ಬಯಸಿ ಬಂದ ಹೆಣ್ಣು	ನಾಡಿಗೇರ ಕೃಷ್ಣರಾಯ	2-00
ತ್ರಿಶಂಕು ನರಕ	,,	2-25
ರಾಣಿ ಮತ್ತೆ ಬರಲಿಲ್ಲ	,,	2-00
ಪ್ರಣಯ ಕೋಲಾಹಲ	,,	2-00
ಹೆಣ್ಣು-ಹೊನ್ನು-ಮಣ್ಣು	ಸೂರ್ಯನಾರಾಯಣ ಚಡಗ	3-00
ಪ್ರೇಮ ದೇವತೆ	,,	2-00
ಮನೆ ನಿನ್ನದು ಮನ ನನ್ನದು	,,	3-00
ಮನೆ ತುಂಬಿದ ಮಡದಿ	,,	2-00
ಮನೆಗೆ ಬಂದ ಸೊಸೆ	,,	2-00
ಸುಂದರ ಸ್ವಪ್ನ	ಎಂ. ರಾಮಮೂರ್ತಿ	2-00
ಚೆಲುವೆ	ಕೃಷ್ಣಮೂರ್ತಿ ಪುರಾಣಿಕ	2-25
ಹೊಸ ಹೆಂಡತಿ	,,	2-00
ಅಣ್ಣನ ಹೆಂಡತಿ	,,	2-00
ಮಂಗಳೆಯ ಮದುವೆ	ಮಾ. ಭೀ. ಶೇಷಗಿರಿರಾವ್	2-00
ಆಟೋರಿಕ್ಷಾದಲ್ಲಿ ಅಪ್ಸರೆ	,,	2-00
ಎಲ್ಲಾ ಅವನ ಹೆಸರಿನಲ್ಲೆ	ತ ರಾ. ಸು.	2-25
ಹೆಣ್ಣಿನ ಹೃದಯ	ಶ್ರೀನಿವಾಸ ಉಡುಪ	2-00
ಬಾಳಿನ ಹಾದಿ	ಮತ್ತೂರು ಕೃಷ್ಣಮೂರ್ತಿ	2-25
ವೀರಪಾಂಡ್ಯ ಕಟ್ಟಬೊಮ್ಮ	,,	1-25
ಅಮೃತ ಹಸ್ತ	ಕೆ. ಎಸ್. ಸರಸ್ವತಿ	2-00
ಮೋಡಮ್ಮನ ಗಂಡ	ಬೀchi	2-00
ಮೂರು ಹೆಣ್ಣು ಐದು ಜಡೆ	,,	2-00
ಅದೃಷ್ಟ ನಕ್ಷತ್ರ	ಅ. ನ ಕೃ.	2-00
ಸುಂದರೂ ಸಂಸಾರ	,,	2-25
ಶ್ರೀಮಂತ ಸುಂದರಿ	ವೈ. ಸು ಶೇ	2-00

ಗೀತಾ ಏಜನ್ಸೀಸ್—ಸೌಕಾರ್‌ಪೇಟೆ, ಬೆಂಗಳೂರು-2

Printed by B. S. Iyengar, Bangalore-2
Publisher—B. N. Gupta. Editor—M. Shivaram